

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT


Volume : 07 | Issue : 262 | Monday 30-06-2025 | E-mail : maruti.b.hosamani76@gmail.com | Page: 4 | Price : Rs. 1/-

## ಮೀಸೆ ಮೂಡದ ಪುಡಿ ಯುವಕರಿಂದ ದಂಧೆ, ಗೂಡು ಸೇರಿದ ಮರಳು ಸಮಿತಿಯ ಆಡಳಿತಾತ್ಮಕ ಅಧಿಕಾರಿಗಳ ಸೇವೆ: ಠುಸ್ ಪಟಾಕಿ

**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಕೇಂದ್ರ ಹಾಗೂ ರಾಜ್ಯ ಸರಕಾರ ಅಕ್ರಮ ಮರಳು ಮಾಫಿಯಾ ದಂಧೆಯನ್ನು ತಡೆಯಲು ಬಲಿಷ್ಠವಾದ ಕಾನೂನನ್ನು ಜಾರಿಗೆ ತಂದರೂ ಸಹ ಮಾನ್ವಿ ತಾಲೂಕಿನಲ್ಲಿ ಮರಳು ಸಮಿತಿ ಅಧಿಕಾರಿಗಳ ದುರಾಡಳಿತ ಡ್ಯೂಟಿ ಮಾಡದೆ ಗೂಡು ಸೇರಿದ್ದರಿಂದ ಅಕ್ರಮ ದಂಧೆ ಕೋರರಿಗೆ ನಿತ್ಯವೂ ಬಾಡೂಟ ಸವಿದಂತಾಗಿದೆ. ಸರಕಾರದ ಅಧಿಕಾರಿಗಳು ಸರಕಾರದ ಹಣವನ್ನು ಸಂಬಳ ರೂಪದಲ್ಲಿ ಪಡೆದರೂ ಖನಿಜ ಸಂಪತ್ತನ್ನಾದರು ಉಳಿಸುವ ಕೆಲಸ ಮಾಡಬೇಕು. ಆದರೆ ಮರಳು ಸಮಿತಿ ಅಧಿಕಾರಿಗಳು ನಮಗ್ಯಾಕೆ ಬೇಕು ಎಂದು ನಾಮಕಾವಸ್ಥೆ ಯಾಗಿ ಒಂದು ಜಿ.ಪಿ.ಎಸ್ ಫೋಟೋ ಹಾಕಿ ಮನೆಗೆ ಸೇರುವ ತಂತ್ರ ಅಧಿಕಾರಿಗಳು ಇರುವುದರಿಂದ ನಾಚಿಕಗೇಡಿನ ಸಂಗತಿಯಾಗಿದೆ.

ಮಾನ್ವಿ ತಾಲೂಕಿನ ದದ್ದಲ ಗ್ರಾಮದಲ್ಲಿ ಹಾದು ಹೋದ ತುಂಗಭದ್ರಾ ನದಿಗೆ ಮೀಸೆ ಮೂಡದ ಪುಡಿ ಕುನ್ನಿಗಳು ಕನ್ನ ಹಾಕುತ್ತ ಸಕಲ ಜೀವ ರಾಶಿಗಳಿಗೂ ಕಂಟಕವಾದರು ಸಹ ಮರಳು ಸಮಿತಿ ಅಧಿಕಾರಿಗಳು ಮಾತ್ರ ಬಲಾಢ್ಯ ರಾಜಕಾರಣಿಗಳ ಮಾತಿಗೆ ಕಿವಿಗೊಟ್ಟು ಎಂಜಲು ಕಾಸಿಗೆ ಹಾಸೆ ಬಿದ್ದು, ಕ್ರಮ ಎಂಬುದು ಇಲ್ಲಿ ಇಲ್ಲವಾಗಿದೆ ಎಂದು ಜನರ ಬಾಯಲ್ಲಿ ಅಧಿಕಾರಿಗಳು ನಗೆಪಾಟಲಿಗೆ ಒಳಗಾಗಿದ್ದಾರೆ. ಮಾನ್ವಿ ತಾಲೂಕಿನ ಮದ್ಲಾಪುರ, ಚೀಕಲಪರ್ವಿ, ಯಡಿವಾಳ, ಜಾಗೀರಪನ್ನೂರು, ಹರನಹಳ್ಳಿ, ರಾಜಲಬಂಡಾ, ಜೂಕೂರು, ರಾಜೊಳ್ಳಿ ಗ್ರಾಮಗಳ ಮೂಲಕ ತುಂಗಭದ್ರಾ ನದಿ ಹಾದು ಹೋದರು ಸಹ ಮರಳು ಖದೀಮರು ಮಾತ್ರ ಯಾವುದನ್ನು ಕೆಲಸ ಮಾಡದೆ, ಹಣ ಗಳಿಸಬೇಕು ಎಂಬ ಕಾರಣಕ್ಕಾಗಿ ಅಕ್ರಮ ಮರಳು ದಂಧೆ ಮಾಡುತ್ತ ಕೋಟಿ ಗಟ್ಟಲೆ ಆಸ್ತಿಗಳಿಸಿ ರಾಜಕಾರಣಿಗಳ ಹಿಂಬಾಲಕರಾಗಿ ಅಧಿಕಾರಿಗಳನ್ನೆ ಯಾಕೆ ಟಿಪ್ಪರ್ ಹಿಡಿಯುತ್ತೀರಾ ಎಂದು ಪ್ರಶ್ನೆ ಮಾಡುತ್ತಿದ್ದಾರೆ ಚೋರರು.






ದದ್ದಲ ಗ್ರಾಮದ ಹೊಸ ಊರಿನ ಮೈದಾನದಲ್ಲಿ ರಾಶಿ ರಾಶಿ ಗಟ್ಟಲೆ ಮರಳು ಸಂಗ್ರಹ ಮಾಡುತ್ತಾರೆ ಅಂದ ಮೇಲೆ ಮಾನ್ವಿ ತಾಲೂಕು ಅನ್ನೋದು ಅಕ್ರಮ ದಂಧೆಗಳ ತವರೂರಾಗಿದೆನಾ ಅಥವಾ ಮಾನ್ವಿ ತಾಲೂಕಿನ ಅಧಿಕಾರಿಗಳಲ್ಲಿ ಗುಂಡಿಗೆ ಇಲ್ಲವೆಂದು ಅಕ್ರಮ ದಂಧೆಕೋರರು ಮರಳು ಮಾಫಿಯಾ ಮಾಡುತ್ತಿದ್ದಾರಾ ಎಂದು ಜನರೆ ಗುಸು ಗುಸು ರೀತಿಯಲ್ಲಿ ಮಾತಾಡುತ್ತಿದ್ದಾರೆ.

ಹಗಲು ಮತ್ತು ರಾತ್ರಿ ಟಿಪ್ಪರ್ಗಳ ಮೂಲಕ ರಾಯಲ್ಟಿ ಇಲ್ಲದೆ ಅಕ್ರಮವಾಗಿ ಮರಳು ಸಾಗಣೆ ಮಾಡಿದರು ಸಿ.ಸಿ ಕ್ಯಾಮೆರಾದಲ್ಲಿ ಸೆರೆಯಾದರು ಅಧಿಕಾರಿಗಳು ಯಾಕೆ ನಿಷ್ಕಾಳಜಿ ತೋರುತ್ತಿದ್ದಾರೆಂದು ತಿಳಿಯದಾಗಿದ್ದು. ಟಿಪ್ಪರ್ಗಳಿಗೆ ಚಾಲಕರು ಯಾರು ಅವರ ಪರವಾನಗಿ ಎಲ್ಲಿದೆ ಎಂಬುದು ತಿಳಿಯುತ್ತಿಲ್ಲ. ಒಂದು ವೇಳೆ ಅಕ್ರಮವಾಗಿ ಮರಳು ಸಾಗಣೆ ಮಾಡುವ ಟಿಪ್ಪರ್ ಮೂಲಕ ಅನಾಹುತವಾದರೆ ಬೇರೊಬ್ಬ ಚಾಲಕ ಬಂದು ನಾನೆ ಚಾಲನೆ ಮಾಡಿದ್ದು, ಅಪಘಾತ ಸಂಭವಿಸಿದೆ ಎಂದು ವಿಚಾರಣೆ ವೇಳೆ ಉತ್ತರ ತಿಳಿಸುತ್ತಾರೆ ಅಂದ ಮೇಲೆ ಮಾನ್ವಿಯಲ್ಲಿ ಕಾನೂನು ಸುವ್ಯವಸ್ಥೆ ಅನ್ನೋದು ಎಷ್ಟರ ಮಟ್ಟಿಗೆ ಇದೆ ಎಂದು ಕಣ್ಣ ಮುಂದೆಯೇ ಕಾಣುತ್ತದೆ.

**ಗಣಿ ಅಧಿಕಾರಿ ಮಹದೇವಸ್ವಾಮಿಯ ಸೇವೆ 'ಠುಸ್ ಪಟಾಕಿ"**

**ಗಣಿ ಅಧಿಕಾರಿ ಮಹದೇವಸ್ವಾಮಿ ಸಾಹೇಬ್ರು ಮಾತ್ರ ಅದೇನು ಡ್ಯೂಟಿ ಮಾಡುತ್ತಾರೆಂದು ಮಾನ್ವಿ ತಾಲೂಕಿನ ದದ್ದಲ ಗ್ರಾಮದ ಹೊಸ ಊರಿನಲ್ಲಿ ನಡೆಯುವ ಅಕ್ರಮ ಮರಳು ಮಾಫಿಯಾ ದಂಧೆಯೇ ಸಾಕ್ಷಿಯಾಗಿ ಕಾಣುತ್ತದೆ. ಮಹದೇವಸ್ವಾಮಿ ಸಾಹೇಬ್ರು ಮಾತ್ರ ನೋಡೋಕೆ ಮಹದೇವಸ್ವಾಮಿ ಆದರೆ ಇವರ ಆಡಳಿತ ಮಾತ್ರ "ಠುಸ್ ಪಟಾಕಿ" ಎಂದು ಮಾನ್ವಿಯ ಜನರೆ ಗುಸು ಗುಸು ಮಾತಾಡಿ ಕೊಳ್ಳುತ್ತಿದ್ದಾರೆ.**

ದದ್ದಲ ಗ್ರಾಮದ ಹೊಸ ಊರಿನಲ್ಲಿರುವ ಮೈದಾನದಲ್ಲಿ ಮರಳು ಖದೀಮರು ರಾತ್ರೋ ರಾತ್ರಿ ಬಂದು ಮರಳು ತುಂಬಿ ಕೊಂಡು ಕಾಲುವೆ ಮಾರ್ಗದ ಮೂಲಕ ಸಾದಾಪುರ ಗ್ರಾಮಕ್ಕೆ ತಲುಪಿ ಕಪಗಲ್ ಕ್ರಾಸ್ ಮೂಲಕ ತೆರಳುತ್ತಾರೆ ಅಂದ ಮೇಲೆ ಕಳ್ಳರ ದಾರಿ ಎಂತದ್ದು ಎಂದು ಅವರ ರಹದಾರಿ ಮಾರ್ಗವೆ ತೋರಿಸುತ್ತದೆ.

ದದ್ದಲ ಗ್ರಾಮದಲ್ಲಿ ನಿತ್ಯವೂ ಮರಳು ಮಾಫಿಯಾ ನಡೆಯುತ್ತದೆ ಅಂದ ಮೇಲೆ ಶಾಸಕ ಹಂಪಯ್ಯ ನಾಯಕರು ಅಕ್ರಮ ಮರಳು ಮಾಫಿಯಾ ದಂಧೆಯನ್ನು ಸ್ಟಾಪ್ ಮಾಡಿಸುತ್ತಾರಾ ಅಥವಾ ನಮಗೆ ಏನು ಗೊತ್ತಿಲ್ಲವೆಂದು ಕಾಣದೆ ಇರುವ ರೀತಿಯಲ್ಲಿ ಕಾರಲ್ಲಿ ಸಂಚಾರ ಮಾಡುತ್ತಾರಾ ಎಂಬುದು ಜನರ ಪ್ರಶ್ನೆಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಶ್ರೀಮತಿ ಜ್ಯೋತಿರವರ ಕಂಚಿನ ಕಂಠದ ಕೋಗಿಲೆಗೆ – ಮುನ್ನೆಲೆಯ ಶುಭ ಸಂದೇಶ





**ಸಿಹಿ ಕಹಿ ಸುದ್ದಿ,**

**ಬಾಗಲಕೋಟ :** ಪುರಾತನ ಕಾಲದಿಂದಲೂ ತನ್ನದೆಯಾದ ಕಲಾ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ಅಪಾರ ಕೊಡುಗೆಯನ್ನು ನೀಡಿದ ಈ ಜನಪದ ಸಾಹಿತ್ಯ ಇಂದಿಗೂ ಕೂಡ ಪ್ರಮುಖ ಪಾತ್ರವನ್ನು ವಹಿಸುತ್ತಿರುವ ಜನಪ್ರಿಯ ಶಾಸ್ತ್ರ ಎಂಬುದು ಮಾನವ ಸಂಸ್ಕೃತಿಯನ್ನುಅಧ್ಯಯನಮಾಡಿದಾಗಸಂಪೂರ್ಣ ಅರ್ಥವಾಗುತ್ತದೆ.

ಗೀತ, ಕಥನ, ನಾಟಕ, ಕುಣಿತ ಆದಾವ ಕಲಾ ಪ್ರಕಾರಗಳಿದ್ದರೂ "ಬದುಕಿನ ರೀತಿ ನೀತಿ, ಆಚಾರ–ವಿಚಾರ, ಸಂಪ್ರದಾಯ ನಂಬಿಕೆಗಳನ್ನು ಹಬ್ಬ ಹರಿದಿನಗಳಲ್ಲಿ ಉಳಿಸಿ ಬೆಳೆಸುವ ಶ್ರೀಮಂತ ಲೋಕವಿದು".

ಇಂತಹ ಅಮೂಲ್ಯ ನಡಿಗೆಯಲ್ಲಿ ಜಾನಪದ ಹಾಡುಗಳ ಮೂಲಕ ನಾಡಿನ ಜನತೆಗೆ ಕಂದ ಕೊಡುಗೆಯನ್ನು ನೀಡುತ್ತಿರುವ ನಮ್ಮ ನಿಮ್ಮೆಲ್ಲರ ಅಚ್ಚುಮೆಚ್ಚಿನ ಜಾನಪದ ಹಾಡುಗಾರ ಅತ್ಮೀಯ ಉಮೇಶ ಚಿನ್ನ ಸಮುದ್ರ ರವರು ನಮ್ಮ ಲಂಬಾಣಿ ಸಮುದಾಯಕ್ಕೊಂದು ಕೀರ್ತಿ ಪಾತ್ರರಾಗಿದ್ದಾರೆ. ಅತ್ಯಂತ ಬಡ ಕುಟುಂಬದಲ್ಲಿ ಜನಿಸಿದ ಇವರು ಸುಮಾರು ವರ್ಷಗಳಿಂದ ತಮ್ಮ ಗಾಯನವೇ ತಮಗೆ ಬಂಡವಾಳ ಎಂಬಂತೆ ಸಾಕಷ್ಟು ಕಾರ್ಯಕ್ರಮಗಳಲ್ಲಿ ಹಾಡು ಹಾಡುವ ಮೂಲಕ ಜಾನಪದ ಕಲಾ ಸೇವೆಯನ್ನು ಸಲ್ಲಿಸುವ ಜೊತೆಗೆ ತಮ್ಮ ಕುಟುಂಬವನ್ನು ಸಾಗಿಸುತ್ತಿದ್ದಾರೆ.


ಇಂತಹ ಬಡ ಪ್ರತಿಭಾನ್ವಿತ ಗಾಯಕನ ಬಗ್ಗೆ "ಮತ್ತೆ ಸುಗ್ಗಿ ಬಂತು ಜಾನಪದ ಲೋಕದಲ್ಲಿ" ಪುಸ್ತಕ ಬಿಡುಗಡೆ ಯಾಗುತ್ತಿರುವುದು ನಿಜಕ್ಕೂ ಸಂತಸದ ಸಂಗತಿಯಾಗಿದೆ. ಇದೇ ರೀತಿ ಬಂಜಾರಾ ಭಾಷೆಯಲ್ಲಿಯೂಅವರಗೀತೆಗಳುಜನಮನಮುಟ್ಟಲಿ ಹಾಗೂ ನಮ್ಮಂತಹ ಹಿಂದುಳಿದ ಪ್ರತಿಭೆಗಳನ್ನು ಕರ್ನಾಟಕ ಸರ್ಕಾರ ಗುರುತಿಸಿ ಗೌರವಿಸು ವಂತಾಗಲಿ ಸೇವಾಲಾಲರ ಕೃಪೆ ಸದಾ ಇವರನ್ನು ಕಾಪಾಡಲಿ ಎಂದು ಹಾರೈಸುತ್ತಾ ನನ್ನೆರಡು ಅನಿಸಿಕೆಗೆ ವಿರಾಮ ಕೋರುತಾ ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್ ಗೆ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ.

**ಲೇಖಕರು:– ಶ್ರೀಮತಿ ಜ್ಯೋತಿ ಕೃಷ್ಣ ನಾಯಕ ಬಾಗಲಕೋಟ**

## ಕಾರ್ಯಕರ್ತರ ಚಲನ ಶೀಲತೆ ವೇಗ ಹೆಚ್ಚಿಸಿದಾಗ ಮಾತ್ರ ದಲಿತರ ಕಾರ್ಯ ಪಡೆ ಹೆಚ್ಚಿಸಿದಂತೆ – ಸಂಘಟನೆಗೆ ಬಲ ಎಂದ ರಾಜ್ಯ ಸಂಚಾಲಕ ಎನ್.ವೆಂಕಟೇಶ್ ತರೀಕೆರೆ

**ಸಿಹಿ ಕಹಿ ಸುದ್ದಿ,**

**ವಿಜಯಪುರ :** ಮಹಾತ್ಮ ಪ್ರೊ, ಬಿ.ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ವಿಜಯಪೂರ ಜಿಲ್ಲಾ ಶಾಖೆಯ ಪದಾಧಿಕಾರಿಗಳ ಸಭೆ ಹಾಗೂ ನೂತನ ಸದಸ್ಯತ್ವ ಅಭಿಯಾನ ಹಾಗು ಮಹಾತ್ಮ ಪ್ರೊ, ಬಿ.ಕೃಷ್ಣಪ್ಪ ನವರಜನ್ಮದಿನಾಚರಣೆಅಂಗವಾಗಿ ವಿಜಯಪುರದ ದರ್ಗಾ ರಸ್ತೆಯಲ್ಲಿರುವ ಮಾದರ ಚೆನ್ನಯ್ಯ ಸಭಾ ಭವನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ರಾಜ್ಯ ಸಂಚಾಲಕ ಎನ್.ವೆಂಕಟೇಶ್ ತರೀಕೆರೆ ಯವರು ಮಾತನಾಡಿ ರಾಜ್ಯದಲ್ಲಿ ಶೋಷಿತ ವರ್ಗದ ಸಮುದಾಯಗಳ ಏಳಿಗೆಗಾಗಿ ಕಟಿ ಬದ್ಧರಾಗಿ ಸಮಿತಿಯ ಕಾರ್ಯಕರ್ತರು ಶ್ರಮಿಸ ಬೇಕೆಂದು ಕರೆ ನೀಡಿದರು. ರಾಜ್ಯ ಸಂಘಟನಾ ಸಂಚಾಲಕರಾದ ಕೆ.ನಂಜಪ ಮೈಸೂರು ರವರು ಮಾತನಾಡಿ ಡಿ.ಎಸ್.ಎಸ್ ಕಾರ್ಯಕರ್ತರು ಶೋಷಿತರ ಮನೆ ಮನೆಗೆ ಹೋಗಿ ಮನೆಯ ಬಾಗಿಲಿಗೆ ತಮ್ಮ ಸೇವೆ ದೊರೆಯುವಂತೆ ಹಾಗೂ ನಿಷ್ಪಕ್ಷಪಾತ ಪ್ರಾಮಾಣಿಕ ಸೇವೆಯನ್ನು ಮಾಡಿ ಕಷ್ಟದಲ್ಲಿರುವವರ ಕೈ ಹಿಡಿಯಬೇಕೆಂದು ಹಾಗೂ ನೊಂದವರ ಪರವಾಗಿ ಹಗಲಿರುಳು ಶ್ರಮಿಸುವಂತಾಗ ಬೇಕೆಂದರು. ಮಾರುತಿ.ಬಿ ಹೊಸಮನಿ ಬಾಗಲಕೋಟ ರವರು ಮಾತನಾಡುತ್ತಾ ಎಲ್ಲಾ ಡಿ.ಎಸ್.ಎಸ್ ಕಾರ್ಯಕರ್ತರು ಸೇನಾನಿಗಳಾಗಿ ದೀನ ದಲಿತರ ರಕ್ಷಕರಾಗ ಬೇಕೆಂದರು. ರಾಜಶೇಖರ್ ಚಾಪನೂರ್ ಬೆಂಗಳೂರು ರವರು ಮಾತನಾಡಿ ನಾವೆಲ್ಲರೂ ಕೂಡ ಸಾರ್ವಜನಿಕ ಸೇವೆಯಲ್ಲಿಶಿಸ್ತಿನಸಿಪಾಯಿಗಳಂತೆ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಅನುಯಾಯಿಗಳಾಗಿ ಇರ ಬೇಕೆಂದರು ರಾಜ್ಯ ಖಜಾಂಚಿ ಮಹದೇವ ಪ್ರಸಾದ್ ಬೆಂಗಳೂರು ರವರು ಮಾತನಾಡುತ್ತಾ ಇಂದಿನ ಯುವ ಪೀಳಿಗೆ ಡಾಕ್ಟರ್, ಬಿ.ಆರ್ ಅಂಬೇಡ್ಕರ್ ರವರ ಆದರ್ಶಗಳನ್ನು ಮೈಗೂಡಿಸಿ ಕೊಂಡು ನಡೆಯ ಬೇಕೆಂದರು. ಆದಿ ನಾರಾಯಣ ಬೆಂಗಳೂರು ದವರು ಮಾತನಾಡಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸದಸ್ಯತ್ವದ ಅಭಿಯಾನ ಮುಂದುವರಿಸ ಬೇಕೆಂದರು. ಶಿವಾನಂದ ಸಾವಳಗಿ ಗುಲ್ಬರ್ಗ ರವರು ಮಾತನಾಡಿ ಆಂತರಿಕ ಶಿಸ್ತು ಸಂಯಮಗಳನ್ನು ರೂಡಿಸಿ ಕೊಂಡು ಮುನ್ನಡೆಯ ಬೇಕೆಂದರು.



ರಾಜ್ಯ ಸಮಿತಿಯ ಅಂಗ ಸಂಸ್ಥೆಯಾದ ರಾಜ್ಯ ಮಹಿಳಾ ಒಕ್ಕೂಟದ ಸಂಚಾಲಕಿ ಎಮ್.ವಿ ಭವಾನಿ ಬಾಳೆಹೊನ್ನೂರು ಇವರು ಪಾಲ್ಗೊಂಡಿದ್ದರು. ವಿಜಯಪುರ ಜಿಲ್ಲೆಯ ರಾಜ್ಯ ಸಂಘಟನಾ ಸಂಚಾಲಕ ತಮ್ಮಣ್ಣ ಖಾನಗಡ್ಡಿ ರವರು ಕಾರ್ಯಕ್ರಮದ ವ್ಯವಸ್ಥೆ ನೋಡಿ ಕೊಂಡರು. ವಿಜಯಪುರ ಜಿಲ್ಲೆಯ ಜಿಲ್ಲಾ ಸಂಚಾಲಕರಾದ ರಾಜು ದಿಂಡವಾರ ರವರು ಕಾರ್ಯಕ್ರಮದ ಆಯೋಜನೆ ಹಾಗೂ ಕಾರ್ಯಕ್ರಮವನ್ನು ಸ್ವಾಗತಿಸಿದರು ವಿಜಯಪುರ ಜಿಲ್ಲಾ ದಲಿತ ಮುಖಂಡರಾದ ಎಲ್ಲಪ್ಪ ಪಡಸಲಗಿ, ರಮೇಶ್ ಮ್ಯಾಗೇರಿ, ಮಹಾಂತೇಶ್ ನಾಗರಬೆಟ್ಟ, ರವಿಚಂದ್ರ ಹಾದಿಮನಿ, ವಿಠಲ್ ಗರಡಿಮನಿ, ಮಂಜುನಾಥ ಭಾಗನಗರ, ಮಂಜುನಾಥ ಕೊಡಗನೂರು, ತಾಲೂಕು ಮುಖಂಡರಾದ ಚಂದ್ರಶೇಖರ ಪಡಸಲಗಿ, ಬಸವನ ಬಾಗೇವಾಡಿ ನಾಗೇಶ್ ಹಳ್ಳೂರ ಮುದ್ದೆ ಬಿಹಾಳ, ಮುಳ್ಳು ದೊಡ್ಡಮನಿ ತಾಳಿಕೋಟೆ, ಮಲ್ಲಿಕಾರ್ಜುನ ಬಡಗಿ ದೇವರ ಹಿಪ್ಪರಗಿ, ಸೋಮು ಮಾದರ ನಿಡಗುಂದಿ, ಪ್ರಕಾಶ್ ನಡುವಿನಕೆರಿ ವಿಜಯಪುರ, ನೂರಾರು ಕಾರ್ಯಕರ್ತರು ಹಾಜರಿದ್ದರು. ರಾಜ್ಯ ಸಂಘಟನಾ ಸಂಚಾಲಕ ಶಿವಾನಂದ ಸಾವಳಗಿ ರವರ ವಂದನಾರ್ಪಣೆ ಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು ಎಂದು ವರದಿಯಾಗಿದೆ.

## ಗಡಿ ಗ್ರಾಮಗಳ ರಸ್ತೆಗಳ ಸಾಮಾಜಿಕ ಸುಧಾರಣೆಗೆ ಒತ್ತು ನೀಡುವೆ: ಡಾ. ಶ್ರೀನಿವಾಸ್. ಎನ್ ಟಿ



**ಸಿಹಿ ಕಹಿ ಸುದ್ದಿ,**

**ಹೂಡೇಂ :** ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕು ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಡಾ, ಶ್ರೀನಿವಾಸ್. ಎನ್ ಟಿ ಅವರು ಹೂಡೇಂ ಗ್ರಾಮದಿಂದ ಶ್ರೀ ಗಾಣಗಟೆ ಕೆರೆ ಮಾಯಮ್ಮ ದೇವಸ್ಥಾನದ ವರೆಗೆ ಸಿ.ಸಿ. ರಸ್ತೆ (?1 ಕೋಟಿ) ಯ ಕಾಮಗಾರಿಯ ಭೂಮಿ ಪೂಜೆಯನ್ನು ಉದ್ಘಾಟಿಸಿ

ಈ ಸಂದರ್ಭದಲ್ಲಿ ಮಾತನಾಡುತ್ತಾ ಇಲ್ಲಿನ ಬಹು ದಿನಗಳ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸ್ಥಳೀಯ ಜನ ಪ್ರತಿ ನಿಧಿಗಳು ಹಾಗೂ ಮುಖಂಡರು ಮನವಿ ಮಾಡಿ ಕೊಂಡಿದ್ದರು. ಆ ನಿಟ್ಟಿನಲ್ಲಿ, ಗಡಿ ಗ್ರಾಮಗಳ ರಸ್ತೆಗಳ ಸಾಮಾಜಿಕ ಸುಧಾರಣೆಗೆ ಒತ್ತು ಕೊಡಲು ಸರ್ಕಾರದ ಉನ್ನತ ಮಟ್ಟದಲ್ಲಿ ಶ್ರಮವಹಿಸಿ ಅನುದಾನ ತಂದು ಇಲ್ಲಿನ ಭಕ್ತರ ಭಾವನೆಗಳನ್ನು ಗೌರವಿಸುವುದಕ್ಕಾಗಿ ಎಲ್ಲಾರ ಸಹಕಾರ ದಿಂದ ಒಳಿತನ್ನೂ ಮಾಡಲಿದ್ದೇವೆ ಎಂದರು. ಹಾಗೆಯೇ ಮುಂದಿನ ದಿನಗಳಲ್ಲಿ ಇಲ್ಲಿನ ಕೆರೆಯನ್ನು ಅಭಿವೃದ್ಧಿ ಪಡಿಸಲಿದ್ದೇವೆ ಎಂದು ನಮ್ಮ ಮಾನ್ಯ ಶಾಸಕರು ತಿಳಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷರು ಮಾಜಿ ಅಧ್ಯಕ್ಷರುಗಳು ಗ್ರಾಮ ಪಂಚಾಯತಿ ಸದಸ್ಯರು ಮಾಜಿ ಸದಸ್ಯರು ಮುಖಂಡರು ಸಾರ್ವಜನಿಕರು ಮಹಿಳೆಯರು ಯುವಕರು ಭಕ್ತಾದಿಗಳು ಉಪಸಿತರಿದ್ದರು ಎಂದು ವರದಿಯಾಗಿದೆ.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ.ಎಸ್ ವೀರೇಶ್.ಕೆ.ಹೊಸಹಳ್ಳಿ**

## ಸ್ವಾಸ್ಥ್ಯ ಬದುಕಿಗೆ ಸಂಗೀತ ಮತ್ತು ಯೋಗ ಅವಶ್ಯ: ಎಸ್.ಸಿ ಬಳ್ಳೂರ

**ಬಾಗಕೋಟೆ :** ಸಂಗೀತ ಮತ್ತು ಯೋಗ ಭಾರತೀಯ ಸಂಸ್ಕೃತಿಯ ಆಧ್ಯಾತ್ಮಿಕ ತಳಹದಿಯಾಗಿವೆ. ಮಾನಸಿಕ ಮತ್ತು ದೈಹಿಕ ರೋಗಗಳಿಂದ ಆಚೆಗೆ ಬರಲು ಮತ್ತು ಏಕಾಗ್ರತೆಯನ್ನು ಹೆಚ್ಚಿಸಿಕೊಳ್ಳಲು ಇವೆರಡು ಅತ್ಯವಶ್ಯಕ ಎಂದು ತಬಲಾ ವಾದಕರಾದ ಪಂ. ಎಸ್.ಸಿ ಬಳ್ಳೂರ ಅವರು ಹೇಳಿದರು.

ನಗರದ ಬಸವೇಶ್ವರ ಕಲಾ ಮಹಾವಿದ್ಯಾಲಯದಹಿಂದುಸ್ಥಾನಿಸಂಗೀತ ವಿಭಾಗ ಮತ್ತು ಡಾ. ಪುಟ್ಟರಾಜ ಗವಾಯಿ ಸ್ಕೂಲ್ ಆಫ್ ಮ್ಯೂಸಿಕ್ ಸಹಯೋಗದಲ್ಲಿ ಮಹಾವಿದ್ಯಾಲಯದ ಸಭಾ ಭವನದಲ್ಲಿ ಹಮ್ಮಿಕೊಳ್ಳಲಾದ ವಿಶ್ವ ಸಂಗೀತ ಮತ್ತು ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಾತಿಗಿಂತ ಸಂಗೀತ ಮನಸ್ಸಿಗೆ ಮುದ ನೀಡುತ್ತದೆ. ನಿರಂತರ ಅಧ್ಯಯನದಿಂದ ಯೋಗ ಮತ್ತು ಸಂಗೀತವನ್ನುರೂಡಿಸಿಕೊಳ್ಳಲು ಸಾಧ್ಯ. ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಸಂಗೀತ ವಿಭಾಗ ಇರುವುದು ಹೆಮ್ಮೆಯ ವಿಷಯ ಎಂದರು.



ಸಿತಾರ ವಾದಕರಾದ ಪಂ. ವಿ.ಜಿ ಮಹಾಪುರುಷ ಮಾತನಾಡಿ ಈ ಭಾಗದ ಸಂಗೀತ ಕ್ಷೇತ್ರದ ಅಭಿವೃದ್ಧಿಯಲ್ಲಿ ಮಹಾವಿದ್ಯಾಲಯದ ಹಿರಿಮೆ ದೊಡ್ಡದು ಎಂದರು.

ಪ್ರಾಚಾರ್ಯರಾದ ಎಸ್.ಆರ್ ಮುಗನೂರಮಠ ಅವರು ಮಾತನಾಡಿ ಯೋಗ ಮತ್ತು ಸಂಗೀತ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಇವುಗಳ ಉದ್ದೇಶ ಆನಂದವನ್ನು ಹೆಚ್ಚಿಸುವುದಾಗಿದೆ. ಆದ್ಯಾತ್ಮದ ತಳಹದಿಯಿಂದ ಆರೋಗ್ಯವನ್ನು ಕಾಪಾಡುವ ಕೆಲಸವನ್ನು ಮಾಡುತ್ತವೆ. ಯೋಗದಲ್ಲಿ ಬರುವ ಮಣಿಪುರ, ಅನಾಹತ ಮತ್ತು ಅನಿಶಿದ್ಧ ಚಕ್ರಗಳು ಸಂಗೀತದ ಸಾಧನೆಗೂ ಅವಶ್ಯಕವಾಗಿವೆ. ಶರೀರ ಸದೃಡವಾಗಿದ್ದರೆ ಶಾರೀರ ಉತ್ತಮಗೊಳ್ಳುತ್ತದೆ. ಏಕಾಗ್ರತೆ ಇದ್ದರೆ ಇವುಗಳಲ್ಲಿ ಸಾಧನೆ ಮಾಡಲು ಸಾಧ್ಯ ಎಂದರು.

ಸಂಗೀತ ವಿಭಾಗದ ಮುಖ್ಯಸ್ಥರಾದ ಡಾ.ಕೆ.ವಿ ಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಂಗೀತಗಾರರಾದ ಡಾ.ಎಸ್.ವಿ ಮಠಪತಿ, ಐಕ್ಯೂಎಸಿ ಸಂಯೋಜಕರಾದ ಡಾ.ಎ.ಯು ರಾಠೋಡ, ಎನ್.ಎಸ್.ಎಸ್ ಘಟಕಾಧಿಕಾರಿ ಆರ್. ಆರ್ ಅರಶಿನಗುಡಿ, ಪ್ರಾದ್ಯಾಪಕರಾದ ಡಾ.ಆರ್.ಎಮ್ ಬೆಣ್ಣೂರ ಸೇರಿದಂತೆ ವಿವಿಧ ವಿಭಾಗದ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ದಿನಾಂಕ : 21–6– 2025 ರಂದು ಸ್ಥಳ:– ಹಳೆ ಪ್ರವಾಸಿ ಮಂದಿರ ಬಾಗಲಕೋಟೆ ಯಲ್ಲಿ ಶ್ರೀ ಹುಲಿಗೆಮ್ಮ ದೇವಿ (ಪ.ಜಾ.) ಸೇವಾ ಸಂಘ (ರಿ) ಬಾಗಲಕೋಟೆ ಹಾಗೂ ಪತಂಜಲಿ ಯೋಗ ತರಬೇತಿ ಶಿಬಿರ ಹಳೆ ಪ್ರವಾಸಿ ಮಂದಿರ ಬಾಗಲಕೋಟೆ ಇವರ ಸಹಯೋಗದಲ್ಲಿ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು. ಯೋಗ ಗುರು ಎನ್. ಬಿ. ಮತಕಟ್ಟಿ , ಯೋಗಾಸನದ ಆಸನಗಳ ಕುರಿತು ಮಾಹಿತಿ ನೀಡಿದರು. ನಿರಂತರವಾಗಿ ಯೋಗ ಮಾಡುವುದರಿಂದ ಆರೋಗ್ಯವಂತರಾಗಿ ಬದುಕಲು ಸಾಧ್ಯ ಎಂದು ಹೇಳಿದರು. ಪ್ರತಿ ದಿನ ಹಳೆ ಪ್ರವಾಸಿ ಮಂದಿರದಲ್ಲಿ ಉಚಿತವಾಗಿ ಯೋಗಾಸನ ತರಬೇತಿಯನ್ನು ನೀಡಲಾಗುತ್ತದೆ ಬಾಗಲಕೋಟೆ ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ವಿನಂತಿಸಿದರು. ಈ ಕಾರ್ಯಕ್ರಮದಲ್ಲಿ . ಸಂಘದ ಸಂಸ್ಥಾಪಕ ಅಧ್ಯಕ್ಷ ನಿಂಗರಾಜ. ಡಿ. ಮಬ್ರುಮಕರ, ಬಸವರಾಜ ಬಾದೋಡಗಿ, ಭೀಮರಾವ್ ಹೀರವೆ, ಈರಣ್ಣ ಹುಣಸಿಕಟ್ಟಿ, ಎಂ.ಎಂ.ಜಾಲವಾದಿ, ಶಾಂತು ಬಡಿಗೇರ, ಕೃಷ್ಣ ನಾಯಕ, ಅನಿಲ್ ಸಿಂಗ ಹಾಗೂ ಮುಂತಾದವರು ಉಪಸ್ಥಿತರಿದ್ದರು.

# ದೈಹಿಕ ಹಾಗೂ ಮನೋಬಲವನ್ನು ಒಂದುಗೂಡಿಸುವುದೇ ಯೋಗ: ವಿಶ್ವಪ್ರಸನ್ನತೀರ್ಥ

**ಬಾಗಲಕೋಟೆ:** ಯೋಗ ಜಗತ್ತಿನ ಉದ್ದಗಲಕ್ಕೂ ವ್ಯಾಪಿಸಿದ್ದು, ದೈಹಿಕ ಹಾಗೂ ಮನೋಬಲವನ್ನು ಜೋಡಿಸುವುದೇ ಯೋಗವಾಗಿದ್ದು ಯೋಗಕ್ಕೆ ಒಂದೂ ಗೂಡಿಸುವ ಶಕ್ತಿ ಇದೆ ಎಂದು ಉಡುಪಿ ಪೇಜಾವರಮಠದ ಮಠಾಧೀಶರಾದ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು ಹೇಳಿದರು

ಅವರು ಬಿವಿವಿ ಸಂಘದ ಕಲಾ, ವಿಜ್ಞಾನ, ವಾಣಿಜ್ಯ ಶಿಕ್ಷಣ ಮಹಾವಿದ್ಯಾಲಯಗಳು ಮತ್ತು ಆಯುರ್ವೇದಿಕ್, ಹೋಮಿಯೋಪತಿ ಕಾಲೇಜುಗಳು ಹಾಗೂ ನರ್ಸಿಂಗ, ಪಾಲಿಟೆಕ್ನಿಕ್, ಅಕ್ಕಮಹಾದೇವಿ ಮಹಿಳಾ ಕಾಲೇಜು, ಪ್ರಾಥ–ಮಿಕ ಹಾಗೂ ಪ್ರೌಡಶಾಲೆಗಳ ಸಹಯೋಗದಲ್ಲಿ ಶನಿವಾರ ಸಂಘದ ಮೈದಾನದಲ್ಲಿ ನಡೆದ ವಿಶ್ವಯೋಗ ದಿನಾಚರಣೆ ಅಂಗವಾಗಿ ನಡೆದ ಯೋಗಾಭ್ಯಾಸದಲ್ಲಿ ಭಾಗವಹಿಸಿ ಸ್ವತ ಯೋಗವನ್ನು ಮಾಡಿ ಮಾತನಾಡಿದ ಅವರು ಯೋಗ ಎಂದರೆ ಕೂಡಿಸುವುದು ಜೋಡಿಸುವುದು ಆಗಿದೆ, ಶರಿರದಲ್ಲಿ ಸ್ವಾಸ್ತ್ಯವನ್ನು ಕೂಡಿಸುವುದೆ ಯೋಗವಾಗಿದೆ, ದೈಹಿಕ ಸ್ವಾಸ್ಥ್ಯ, ಮಾನಸಿಕ ಸ್ವಾಸ್ಥ್ಯ ಕೂಡಿಕೋಂಡು ದ್ಯಾನದ ಸ್ವಾಸ್ಥ್ಯದ ಮೂಲಕ ಆತ್ಮವನ್ನು ಭಗವಂತನಲ್ಲಿ ಸಾಕ್ಷಾತ್ಕಾರ ಗೊಳಿಸುವ ವಿದ್ಯೆಯೇ ಯೋಗವಾಗಿದೆ, ಭಾರತೀಯ ಎಲ್ಲ ಶಾಸ್ತ್ರಗಳ ಪರಮ ಗುರಿ ಭಗವಂತನನ್ನು ಸೇರುವುದು ಅದು ಮೋಕ್ಷ, ಅದಕ್ಕೆ ಯೋಗದ ಮುಖಾಮಂತರ ಮನುಷ್ಯನಿಗೆ ದೈಹಿಕ ಬಲ, ಮನೋಬಲವನ್ನು ಕೂಡಿಸಿ ಭಗವಂತನ ಜೋತೆಗೆ ಕೂಡಿಸುವು ಶಕ್ತಿ ಯೋಗಕ್ಕೆ ಇದೆ, ಈ ವಿದ್ಯೆ ಇಂದಿನ ಎಲ್ಲ ಕಾಲಗಟ್ಟದಲ್ಲಿಯೂ ಯೋಗ ಪ್ರಸ್ತುತ, ಹಿಂದಿನ ಕಾಲದ ಬದುಕಿನ ಪ್ರತಿ ನಡೆಯು ಕೂಡಾ ಒಂದೊಂದು ಯೋಗಾಭ್ಯಾಸವಾಗಿ–ತ್ತು, ಆದರೆ ಇವತ್ತು ನಮ್ಮ ಬದುಕಿಗೆ ನಾವು ಯಂತ್ರಗಳನ್ನು ಬಹುವಾಗಿ ಅವಲಂಬಿಸಿದ್ದೆವೆ, ನಮ್ಮ ಬದುಕು ಯಾಂತ್ರಿಕ ಬದುಕಾಗಿದೆ, ಈ ಹಂತದಲ್ಲಿ ನಮ್ಮ ದೇಹಕ್ಕೆ ಅಗತ್ಯವಿರುವಂತಹ



ವ್ಯಾಯಾಮ ದೊರಕದೆ ಹೋದಾಗ ಅನಾರೋಗಕ್ಕೆ ಒಳಪಡುತ್ತದೆ, ಇದನ್ನು ಮನಗಂಡ ನಮ್ಮ ಪ್ರಾಚೀನ ಋಷಿ ಮುನಿಗಳು ಇಂಥ ಯೋಗ ವಿದ್ಯಯನ್ನು ನಿಡಿದ್ದಾರೆ, ಇಂದಿನ ಪಿಳಿಗೆ ಜೀವನದಲ್ಲಿ ಯೋಗವನನ್ನು ಹೆಚ್ಚು ಅಳವಡಿಸಿಕೋಳ್ಳಬೇಕು, ಸಂಘ ಹಾಗೂ ಸಂಘದ ಕಾರ್ಯಾದ್ಯಕ್ಷರಾದ ಡಾ. ವೀರಣ್ಣ ಚರಂತಿಮಠರು ಬೃಹತ ಯೋಗವನ್ನು ಸಂಘಟಿಸಿರುವುದು ಶ್ಲಾಘನೀಯ ಎಂದರು.

ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ. ವೀರಣ್ಣ ಚರಂತಿಮಠ ಮಾತನಾಡಿ ಯೋಗ ಈ ದೇಶದ ಆತ್ಮಸಾಕ್ಷಾತ್ಕಾರದ ಒಂದು ಮಾರ್ಗವಾಗಿದೆ, ದೇಹ ಹಾಗೂ ಮನಸ್ಸಿನ ನಿಯಂತ್ರಣಕ್ಕೆ ಯೋಗ ಅಗತ್ಯವಾಗಿದೆ, ನಾಡಿನ ಉಡಪಿ ಪೇಜಾವರಮಠದ ಶ್ರೀಗಳಾದ ಪೂಜ್ಯ ವಿಶ್ವತೀರ್ಥ ಶ್ರೀಪಾದಂಗಳವರು ಯೋಗದಲ್ಲಿ ಪಾಲ್ಗೋಂಡು ಮಾರ್ಗದರ್ಶನ ಮಾಡಿದ್ದು ನಮ್ಮೆಲ್ಲರ ಭಾಗ್ಯ ಎಂದರು. 45 ನಿಮಿಷಗಳ ಕಾಲ ವಿವಿಧ ಆಸನಗಳನ್ನು ಪ್ರದರ್ಶಿಸುವ ಮೂಲಕ ಯೋಗ ಮಹತ್ವವನ್ನು ಸಾರಿದರು, ಪ್ರದರ್ಶನದಲ್ಲಿ ಕಾಲೇಜು ವಿದ್ಯಾರ್ಥಿಗಳು ಸಾರ್ವಜನಿಕರು ಸೇರಿದಂತೆ 5 ಸಾವರಿಕ್ಕಿಂತ ಹೆಚ್ಚು ಜನ ಪಾಲ್ಗೊಳ್ಳುವ ಮೂಲಕ ತಾಡಾಸಾನ, ಮನಸ್ಸು ಶಾಂತಾವಾಗಿಟ್ಟುಕೊಳ್ಳುವ ವೃಕ್ಷಾಸನ, ಪಾದ ಹಸ್ತಾಸನ, ಅರ್ಧ ಚಕ್ರಾಸನ, ಭದ್ರಾಸನ, ವಜ್ರಾಸನ, ಭುಜಂಗಾಸನ್, ಶಲಭಾಸನ, ಸೇತು ಬಂದಾಸನ, ಪವನಮುಕ್ತಾಸನ. ಶವಾಸನ, ಪ್ರಾಣಯಾಮ, ದ್ಯಾನ ಸೇರಿಂದತೆ ವಿವಿಧ ಆಸನಗಳನ್ನು ಪ್ರದರ್ಶಿಸಲಾಯಿತು, ನಂತರ ಬಿವಿವಿಎಸ್ ಆಯುರ್ವೇಧ ಮಹಾವಿದ್ಯಾಲಯದ ವಿದ್ಯಾರ್ಥಿನಿಯ–ರಿಂದ ಮಾರ್ಡನ ಯೋಗಾ ನೃತ್ಯ ಜನಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾದ್ಯಕ್ಷ ಗುರುಬಸವ ಸೂಳಿಭಾವಿ, ಆಯುರ್ವೇಧ ಹಾಗೂ ಹೋಮಿಯೋಪತಿ ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಾಸನೂರ, ಪಂಡಿತ ಅರಬ್ಬಿ, ಎಸ್.ಆರ. ಮನಹಳ್ಳಿ, ಶಿವಲಿಂಗಪ್ಪ ಮೋರಬ, ಕುಮಾರ ಜಿಗಜಿನ್ನಿ ಸೇರಿದಂತೆ ಸಂಘದ ಎಲ್ಲ ಸದಸ್ಯರುಗಳು, ಸಂಘದ ಮುಖ್ಯ ಸಲಹೆಗಾರರಾದ ಡಾ.ಮೀನಾ ಚಂದಾವರಕರ, ಆಡಳಿತಾಧಿಕಾರಿಗಳು, ವಿವಿಧ ಮಹಾವಿದ್ಯಾಲಯಗಳ ಪ್ರಚಾರ್ಯರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಯೋಗಾಪೋಟೋಕಾಲ ನಿರೂಪಣೆಯನ್ನು ಆಯುರ್ವೇದ ಮಹಾವಿದ್ಯಾಲಯದ ಯೋಗಾ ವಿಭಾಗದ ಸಹಪ್ರಾಧ್ಯಾಪಕಿ ಡಾ.ವೀಣಾ ಪತ್ತಾರ ನಿರೂಪಿಸಿದರು, ಯೋಗಗೀತೆಯನ್ನು ವೈಷ್ಣವಿ ಜಾದವ ಹಾಡಿದರು, ಡಾ.ವಿ.ಎಸ್.ಚೌದರಿ ವಂದಿಸಿದರು.

## ತೋವಿವಿಯಲ್ಲಿ ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮ

# ಪ್ರಮಾಣ ಪತ್ರ ಪಡೆದವರು ಪ್ರಾಮಾಣಿಕವಾಗಿ ಕಾರ್ಯನಿರ್ವಹಿ: ಗದ್ದಿಗೌಡರ

**ಬಾಗಲಕೋಟ :** ಸಂಕಷ್ಟದಲ್ಲಿರುವ ರೈತ–ರಿಗೆ ಸಹಾಯ ಮಾಡುವ ಉದ್ದೇಶದಿಂದ ತಮಗೆಲ್ಲ ತರಬೇತಿ ನೀಡಿ, ಇಂದು ನಿಮಗೆ ಕೊಡುವ ಪ್ರಮಾಣ ಪತ್ರವನ್ನು ಪಡೆದು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿ, ರೈತರ ಅಭಿವೃದ್ದಿಗೆ ಶ್ರಮಿಸುವಂತೆ ಸಂಸದ ಪಿ.ಸಿ.ಗದ್ದಿಗೌಡರ ಹೇಳಿದರು.

ತೋಟಗಾರಿಕೆ ವಿವಿಯ ಆಡಳಿತ ಮಂಡಳಿಯ ಸಭಾಂಗಣದಲ್ಲಿ ಭಾರತ ಸರಕಾರ ಹೈದರಾಬಾದನ ಎಂ.ಎ. ಎನ್.ಎ.ಜಿ.ಇ, ಎಸ್.ಎ.ಎಂ.ಇ.ಟಿಐ (ಉತ್ತರ), ಧಾರವಾಡ ಕೃಷಿ ವಿಶ್ವವಿದ್ಯಾಲಯ, ಬಾಗಲಕೋಟೆ ತೋವಿವಿ ಹಾಗೂ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಯೋಗದಲ್ಲಿ ಕೃಷಿ ಪರಿಕರಣ ಮಾರಾಟಗಾರರಿಗೆ ಕೃಷಿ ಡಿಪ್ಲೋಮಾ ಪದವಿ ಪ್ರಮಾಣ ಪತ್ರಗಳ ಪ್ರಧಾನ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ರೈತರ ಅನುಕೂಲಕ್ಕಾಗಿ ಅನೇಕ ಯೋಜನೆಗಳನ್ನು ತಂದಿದ್ದರು ಕೂಡಾ ಇನ್ನು ರೈತರ ಸಮಸ್ಯೆಗಳು ಸಮಸ್ಯೆಗಳಾಗಿ ಉಳಿದಿವೆ ಎಂದರು.

ರೈತರಿಗೆ ಬೀಜ, ಗೊಬ್ಬರ, ಮಣ್ಣಿನ ಫಲವತ್ತತೆ ಹಾಗೂ ಪ್ರಮಾಣ ವಾತಾವರಣಗಳ ಮತ್ತು ಕಡಿಮೆ ಸಮಯದ ಹೆಚ್ಚು ಇಳುವರಿ ನೀಡುವ ವಿವಿಧ ಮಾದರಿಯ ಬೆಳೆಗಳನ್ನು



ಬೆಳೆಯುವ ಮಾದರಿಗಳನ್ನು ತರಬೇಥಿ ಪಡೆದ ನೀವುಗಳೆಲ್ಲ ರೈತರಿಗೆ ತಿಳಿಸುವ ಕಾರ್ಯವಾಗಬೇಕು ಎಂದರು. ಜಮೀನು ಇದ್ದಷ್ಟೇ ಇದ್ದು, ಜನಸಂಖ್ಯೆ ಬೆಳೆಯುತ್ತಾ ಹೋಗುತ್ತಿದೆ. ಹೀಗಾಗಿ ಆಹಾರ ಭದ್ರತೆಗಾಗಿ ಅಲ್ಪಾವಧಿಯಲ್ಲಿ ಅಧಿಕ ಇಳುವರಿ ಕೊಡುವ ಹಾಗೂ ಎಲ್ಲ ತರಹದ ಬೆಳೆಗಳನ್ನು ನಮ್ಮ ಭಾಗದಲ್ಲಿ ಬೆಳೆಯುವಂತಹ ರೈತರಿಗೆ ಹುರುದುಂಬಿಸುವ ಕಾರ್ಯವಾಗಬೇಕು ಎಂದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ, ಭಾರತ ಹಳ್ಳಿಗಳಿಂದ ಕೂಡಿದ ದೇಶ, ಕೃಷಿ ಪ್ರಧಾನವಾದ ದೇಶ, ರೈತ ದೇಶದ ಬೆನ್ನೆಲುಬು ಮತ್ತು ರೈತ ಅನ್ನದಾತ ಎಂದು ಹೊಗಳುವುದೇ ಇಂದು ಹೆಚ್ಚಾಗಿದ್ದು, ರೈತರಿಗೆ ಸ್ಪಂದಿಸುವಂತ ಕಾರ್ಯ ಇದುವರೆಗೆ ಆಗುತ್ತಿಲ್ಲ. ಕೃಷಿ, ತೋಟಗಾರಿಕೆ ವಿಶ್ವವಿದ್ಯಾಲಯಗಳು ವಿವಿಧ ಮಾದರಿಯ ಬೆಳೆಗಳನ್ನು ಸಂಶೋಧಿಸಿ ಆಧುನಿಕ ಹಾಗೂ ಉಪಯುಕ್ತ ಬೆಳೆಗಳಾದ ತೋಟಗಾ–ರಿಕೆ ಬೆಳೆಗಳಾದ ಹಣ್ಣು, ಹೂ, ಔಷಧಿಯ ಸಸ್ಯಗಳನ್ನು ಬೆಳೆಯಲು ನಮ್ಮ ಜಿಲ್ಲೆಯ ನೆಲ ಉಪಯುಕ್ತವಾಗಿದೆ. ಈಗಾಗಲೇ ಜಿಲ್ಲೆಯ ಮುಧೋಳ ತಾಲೂಕಿನಲ್ಲಿ ರೈತರೊಬ್ಬರು ಸೇಬು ಹಣ್ಣು ಬೆಳೆದು ತೋರಿಸಿದ್ದಾರೆ. ಹಿಂದೆ ಕಾಶ್ಮೀರ ಹಾಗೂ ಮುಂತಾದ ಪ್ರದೇಶಗಳಲ್ಲಿ ಬೆಳೆಯಬಹುದಾಗಿದ್ದ ಸೇಬು ಇಂದು ನಮ್ಮ ಭಾಗದಲ್ಲಿ ಬೆಳೆಯುತ್ತಿದೆ ಎಂದರೆ ಇನ್ನುಳಿದ ಬೆಳೆಗಳು ಕೂಡಾ ಇಲ್ಲಿ ಬೆಳೆಯಬಹುದಾಗಿದೆ ಎಂದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಡಾ.ಎಂ.ವಿ.ಮಂಜುನಾಥ ಮಾತನಾಡಿ, ಕೃಷಿ ಹಾಗೂ ತೋಟಗಾ–ರಿಕೆ ವಿಶ್ವವಿದ್ಯಾನಿಲಯಗಳಲ್ಲಿ ರೈತರಿಗೆ ಉಪಯುಕ್ತವಾಗುವಂತ ತರಬೇತಿಗಳನ್ನು ನೀಡಲಾಗಿದ್ದು, ಅದರಲ್ಲಿ 9991 ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ ರೈತರಿಗೆ ಉಪಯುಕ್ತ ಮಾಹಿತಿ ನೀಡಲು ನಿಯೋಜಿಸಲಾಗಿದೆ. ಇದರಿಂದ 2.5 ಕೋಟಿ ಜನ ರೈತರಿಗೆ ಮುಂಗಾರು ಬೆಳೆಗಳ ಅಭಿಯಾನ ನಡೆಸಲಾಗಿದ್ದು, ಪ್ರತಿ ಹೆಕ್ಟೇರ್‌ಗೆ ಸರಾಸರಿ ಒಂದು ಕ್ವಿಂಟಲ್‌ನಷ್ಟಾದರೂ ಹೆಚ್ಚಿಸುವ ಕಾರ್ಯವಾಗಬೇಕು ಎಂದರು.

ಈ ಸಂದರ್ಭದಲ್ಲಿ ತರಬೇತಿ ಪಡೆದವರಲ್ಲಿ ಬಂಗಾರದ ಪದಕ ಪಡೆದ ಚಂದ್ರಶೇಖರ, ಬೆಳ್ಳಿ ಪದಕ ಪಡೆದ ಸವಿತಾ ಕರಬೂರವರ ಹಾಗೂ ಕಂಚು ಪದಕ ಪಡೆದ ವೆಂಕಟರೆಡ್ಡಯವ–ರಿಗೆ ಪದಕವನ್ನು ವಿತರಿಸಲಾಯಿತು. ಕಾರ್ಯಕ್ರಮದ ಪೂರ್ವದಲ್ಲಿ ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕೃಷಿ ವಿಸ್ತರಣಾ ನಿರ್ದೇಶಕ ವೆಂಕಟೇಶಲು, ಕೃಷಿ ವಿಶೇಷ ಅಧಿಕಾರಿ ಜಾಧವ, ಕೃಷಿ ಉಪನಿರ್ದೇಶಕ ರೂಢಗಿ ಸೇರಿದಂತೆ ಇತರರು ಉಪಸ್ಥಿತ–ರಿದ್ದರು.

# ಭಗವಂತ ಕೊಟ್ಟ ಕಾಣಿಕೆಯೇ ಅವರ ಮಗಳ ಸಾಧನೆ

**ಮಹಾಲಿಂಗಪುರ :** ಶಿಕ್ಷಣವೆಂದರೆ ಕೇವಲ ಅಕ್ಷರ ಜ್ಞಾನವಲ್ಲ. ಕ್ರೀಡೆ, ಕರಾಟೆ, ನೃತ್ಯ ಮುಂತಾದ ಚಟುವಟಿಕೆಗಳ ಸಂಗಮ. ಆ ದಿಶೆಯಲ್ಲಿ ನನ್ನ ತಂದೆಯವರ ಮಾರ್ಗದರ್ಶನದಲ್ಲಿ ಓದಿನಲ್ಲಿ ತರಗತಿಗೆ ಯಾವಾಗಲೂ ಪ್ರಥಮ ಸ್ಥಾನದಲ್ಲಿದ್ದು ಕ್ರೀಡೆ, ಕರಾಟೆ, ನೃತ್ಯಗಳಲ್ಲಿಯೂ ವಿಶೇಷ ಸಾಧನೆ ಇತ್ತು. ಈಗ ಭಾರತೀಯ ಕ್ರೀಡಾ ಪ್ರಾಧಿಕಾರದ ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರಕ್ಕೆ ಆಯ್ಕೆಯಾಗಿದ್ದೇನೆ. ನಿರಂತರ ಅಭ್ಯಾಸ ಮತ್ತು ಕಠಿಣ ಪರಿಶ್ರಮದಿಂದ ಸಾಧನೆ ಸಾಧ್ಯವಿದೆ ಎಂದು ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರದ ತರಬೇತಿಗೆ ಆಯ್ಕೆಯಾದ ವಿದ್ಯಾರ್ಥಿನಿ ಪೃಥ್ವಿ ಧರೆಪ್ಪ ಬ್ಯಾಕೋಡ ಹೇಳಿದರು.



ಸಮೀಪದ ಕೆಸರಗೊಪ್ಪ ಗ್ರಾಮದ 9 ನೇ ತರಗತಿ ವಿದ್ಯಾರ್ಥಿನಿ ಪೃಥ್ವಿ, ಲಕ್ನೋದ ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರಕ್ಕೆ ದೇಶದ ವಿವಿಧ ರಾಜ್ಯಗಳಿಂದ ಆಯ್ಕೆಯಾದ ಎಂಟು ಮಹಿಳಾ ಕ್ರೀಡಾಪಟುಗಳ ಪಟ್ಟಿಯಲ್ಲಿ ಮೊದಲ ಸಾಲಿನಲ್ಲಿ ಕರ್ನಾಟಕದಿಂದ ಏಕೈಕ ಬಾಲಕಿಯಾಗಿ ಆಯ್ಕೆಯಾಗಿ ಸಾಧನೆ ಮಾಡಿರುವ ಪ್ರಯುಕ್ತ ಸ್ಥಳೀಯ ಜೇಸಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಸನ್ಮಾನ ಸ್ವೀಕರಿಸಿ ಮಾತನಾಡಿದಳು.

ಸಂಸ್ಥೆಯ ಉಪಾಧ್ಯಕ್ಷ ಶಿವಾನಂದ ತಿಪ್ಪಾ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಜನಿಸಿ ಕಿರಿಯ ವಯಸ್ಸಿನಲ್ಲಿ ಹಿರಿಯ ಸಾಧನೆ ಮಾಡಿ ರಾಜ್ಯಕ್ಕೆ ಕೀರ್ತಿ ತಂದಿರುವುದು ನಮ್ಮ ಹೆಮ್ಮೆ. ಅವರ ತಂದೆ ಊರಿನ ಬಡ ಹೆಣ್ಣು ಮಕ್ಕಳನ್ನು ರಾಷ್ಟ್ರಮಟ್ಟದ ಕ್ರೀಡಾಪಟುಗಳಾಗಿ ಮಾಡುವಲ್ಲಿ ಕೈಯಿಂದ ಹಣ ಖರ್ಚು ಮಾಡಿ ನೀಡಿದ ಉಚಿತ ತರಬೇತಿ ಮತ್ತು ಶ್ರಮಕ್ಕೆ ಭಗವಂತ ಕೊಟ್ಟ ಕಾಣಿಕೆಯೆ ಅವರ ಮಗಳ ಸಾಧನೆಯಾಗಿದೆ ಎಂದರು.

ಮುಖ್ಯೋಪಾಧ್ಯಾಯರಾದ ಎಸ್. ಜಿ. ಕೌಜಲಗಿ, ನಾರನಗೌಡ ಉತ್ತಂಗಿ, ಸಾಧಕಿಯ ತಂದೆ ಧರೆಪ್ಪ ಬ್ಯಾಕೋಡ, ಯೋಗ ಶಿಕ್ಷಕ ರಾಘವೇಂದ್ರ ನೀಲನ್ನವರ, ಶಿಕ್ಷಕರಾದ ಎಸ್. ಬಿ. ಮಟಗಾರ, ಶಾರದಾ ಮನ್ನಯ್ಯನವರಮಠ, ಸುಜಾತಾ ಹೊಸಕೇರಿ, ಸೌರಭ ಮಹಾಜನ ಉಪಸ್ಥಿತರಿದ್ದರು.

# ಯೋಗ ಒಂದು ಅತ್ಯಮೂಲ್ಯ ಕೊಡುಗೆಯಾಗಿದೆ



**ಮೂಡಲಗಿ :** ಯೋಗವು ಭಾರತ ದೇಶದಲ್ಲಿ ಮಾನವ ಶರೀರದ ರೋಗವನ್ನು ಹೋಗಲಾಡಿಸುವ ಪಾರಂಪ–ರಿಕ ಚಿಕಿತ್ಸಾ ಪದ್ಧತಿಯಾಗಿದ್ದು, ನಮ್ಮ ದೇಶ ಜಗತ್ತಿಗೆ ನೀಡಿದ ಬೆಲೆ ಕಟ್ಟಲಾಗದ ಒಂದು ಮಹಾನ ಕೊಡುಗೆ ಯೋಗಭ್ಯಾಸವಾಗಿದೆ ಎಂದು ರಾಜ್ಯಸಭೆ ಸಂಸದ ಈರಣ್ಣ ಕಡಾಡಿ ಹೇಳಿದರು.

ಶನಿವಾರ ಮೂಡಲಗಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಕೇಂದ್ರ ಆಯುಷ್ ಸಚಿವಾಲಯ, ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ, ನವದೆಹಲಿ, ತಾಲೂಕಾಡಳಿತ ಮೂಡಲಗಿ, ಸಾಮಾಜಿಕ ಆರ್ಥಿಕ ಮತ್ತು ಕಲ್ಯಾಣ ಸಂಸ್ಥೆ ಕಲ್ಲೋಳಿ, ಮೂಡಲಗಿ ಶಿಕ್ಷಣ ಸಂಸ್ಥೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಭಾರತ ಸರ್ಕಾರದ 'ಹಸಿರು ಯೋಗ' ಪರಿಕಲ್ಪನೆಯೊಂದಿಗೆ ಹನ್ನೊಂದನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಸಸಿಗೆ ನೀರುಣಿಸುವ ಮೂಲಕ ಸಂಸದ ಈರಣ್ಣ ಕಡಾಡಿ ಚಾಲನೆ ನೀಡಿ ಮಾತನಾಡಿದರು.

ಭಾರತ ದೇಶ ಜಗತ್ತಿಗೆ ಸೊನ್ನೆ ಮತ್ತು ಆಯುರ್ವೇದಗಳಂತಹ ಅತಿ ದೊಡ್ಡ ಕೊಡುಗೆಗಳ ಜೊತೆಗೆ ಯೋಗವನ್ನು ಕೂಡಾ ನೀಡಿದೆ. ಐದು ಸಾವಿರ ವರ್ಷಗಳಿಂದ ಭಾರತೀಯ ನೆಲದ ಋಷಿಮುನಿಗಳಿಂದ ಪ್ರಾರಂಭವಾದ ಯೋಗಾಭ್ಯಾಸವನ್ನು ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋದ ನಮ್ಮ ಜನರು ಮರತೇ ಬಿಟ್ಟಿದ್ದರು.

ಆದರೆ ಕಳೆದ ಹನ್ನೊಂದು ವರ್ಷಗಳಿಂದ ಪ್ರಧಾನಿ ನರೇಂದ್ರ ಮೋದಿ ಅವರ ವಿಶೇಷ ಪರಿಶ್ರಮ ಮತ್ತು ಕಾಳಜಿಯ ಪರಿಣಾಮವಾಗಿ ಇಡೀ ವಿಶ್ವಕ್ಕೆ ಯೋಗವನ್ನು ಪರಿಚಯಿಸಿದ ಹಿರಿಮೆ ಭಾರತಕ್ಕಿದೆ ಎಂದರು. ಯೋಗದಿಂದ ರೋಗವನ್ನು ದೂರ ಮಾಡಿ ಸ್ವಸ್ಥ, ಸದೃಢ ಸಮಾಜ ಕಟ್ಟಲು ಸಾಧ್ಯವಿದೆ. ಹೀಗಾಗಿ ಪ್ರತಿಯೊಬ್ಬರು ಪ್ರತಿದಿನ ಯೋಗ ಮಾಡಿ ಆರೋಗ್ಯಯುತ ಜೀವನ ರೂಪಿಸಿಕೊಳ್ಳಲು ಕಂಕಣ ಬದ್ದರಾಗಬೇಕೆಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಮೂಡಲಗಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಭಾರತ ಸರ್ಕಾರದ 'ಹಸಿರು ಯೋಗ' ಪರಿಕಲ್ಪನೆ ಅಂಗವಾಗಿ ಸಸಿಗಳನ್ನು ನೆಡಲಾಯಿತು.

ಮೂಡಲಗಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವೆಂಕಟೇಶ ಸೋನವಾಲ್ಕರ, ನಿರ್ದೇಶಕರಾದ ವಿಜಯ ಸೋನವಾಲ್ಕರ, ಪ್ರಮುಖರಾದ ಶಿವಬಸು ಹಂದಿಗುಂದ, ನಿಂಗಪ್ಪ ಪಿರೋಜಿ, ಕುಮಾರ ಗಿರಡ್ಡಿ, ಈಶ್ವರ ಮುರಗೋಡ, ಈರಪ್ಪ ಢವಳೇಶ್ವರ, ಸದಾಶಿವ ನೇರ್ಲಿ, ಶಿವಾನಂದ ಮಗದುಮ್, ಪ್ರಾಚಾರ್ಯ ಎಸ್. ಎಲ್. ಚಿತ್ರಗಾರ, ಮಹಾಂತೇಶ ಪಾಟೀಲ, ಮಲ್ಲಪ್ಪ ಕಂಕಣವಾಡಿ, ಸೇವಾ ಸಂಸ್ಥೆ ಅಧ್ಯಕ್ಷ ಪರಪ್ಪ ಗಿರೆಣ್ಣವರ ಸೇರಿದಂತೆ ಸ್ಥಳೀಯ ಮುಖಂಡರು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಆಯುಷ್ ಇಲಾಖೆಯ ಅಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತ–ರಿದ್ದರು.

# ಯೋಗದಿಂದ ಮನಸ್ಸು ಸಂತೋಷಗೊಳ್ಳುವುದು

**ತೇರದಾಳ :** ಯೋಗಕ್ಕೆ ಇರುವ ಶಕ್ತಿ ಬಹಳಷ್ಟು ದೊಡ್ಡದು. ಮನುಷ್ಯ ನಿಜವಾಗಿಯೂ ಸಂತೋಷವಾಗಿರಬೇಕು ಎಂದರೆ ಪ್ರತಿದಿನ ಯೋಗ ಮಾಡುವುದನ್ನು ರೂಢಿಸಿಕೊಳ್ಳಬೇಕೆಂದು ರಬಕವಿಯ ಯೋಗಪಟು ಪತ್ರಕರ್ತ ಬಸಯ್ಯ ವಸ್ತ್ರದ ಹೇಳಿದರು.

ಇಲ್ಲಿನ ಸಿದ್ಧೇಶ್ವರ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು. ಇಂದು ಮನುಷ್ಯ ಸಾಕಷ್ಟು ಒತ್ತಡದ ಜೀವನ ನಡೆಸುತ್ತಿರುವುದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುವಂತಾಗುತ್ತಿದೆ. ಆದರೆ ಉತ್ತಮ ಆರೋಗ್ಯಕ್ಕಾಗಿ ಯೋಗದ ಅವಶ್ಯಕತೆ ಇದೆ ಎಂಬುದನ್ನು ಅರಿಯಬೇಕೆಂದು ಹೇಳಿದರು. ಸಂಸ್ಥೆ ಅಧ್ಯಕ್ಷ ಡಾ. ಶಂಕರ ಅಥಣಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಗುರು ಬಿ. ಟಿ. ಪತ್ತಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಚೇರಮನ್ ಮಹೇಶ ಯಾದವಾಡ, ಪ್ರೌಢ ವಿಭಾಗದ ಮಹೇಶ ಹಂಜಿ, ಪ್ರಾಥಮಿಕ ವಿಭಾಗದ ಕಾಶಿನಾಥ ತಳ್ಳಿ, ಡಿ. ಎ. ಉಗಾರ ಹಾಜರಿದ್ದರು.

# ಬಿಜೆಪಿ ಘಟಕದಿಂದ ಯೋಗ ದಿನಾಚರಣೆ

**ಮಹಾಲಿಂಗಪುರ:** ಪಟ್ಟಣದ ಬನಶಂಕರಿ ಸಾಂಸ್ಕೃತಿಕ ಭವನದಲ್ಲಿ ಶನಿವಾರ ಬಿಜೆಪಿ ನಗರ ಘಟಕ ಮತ್ತು ಸೈದಾಪೂರ ಜಿಲ್ಲಾ ಪಂಚಾಯತ್ ಬಿಜೆಪಿ ಘಟಕದ ವತಿಯಿಂದ ವಿಶ್ವ ಯೋಗ ದಿನಾಚರಣೆ ಆಚರಿಸಲಾಯಿತು.

ಬಿಜೆಪಿ ಮುಖಂಡರಾದ ಮಹಾಂತೇಶ ಹಿಟ್ಟಿನಮಠ, ಬಸನಗೌಡ ಪಾಟೀಲ ಅವರು ಭಾರತಮಾತೆಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಯೋಗ ದಿನಾಚರಣೆ ಉದ್ಘಾಟಿಸಿದರು.

ಯೋಗ ಸಾಧಕ ಶಿವಕುಮಾರ ಪಾಟೀಲ ಅವರು ಯೋಗದ ವಿವಿಧ ಆಸನಗಳನ್ನು ತಿಳಿಸಿಕೊಟ್ಟು ನಿತ್ಯ ಯೋಗ ಮಾಡಿ ಆರೋಗ್ಯಪೂರ್ಣ ಜೀವನ ನಡೆಸಲು ಕರೆ ನೀಡಿದರು.

ಬಿಜೆಪಿ ನಗರ ಘಟಕದ ಅಧ್ಯಕ್ಷ ಶಂಕರಗೌಡ ಪಾಟೀಲ, ಸೈದಾಪೂರ ಗ್ರಾಮ ಪಂಚಾಯತ್ ಅಧ್ಯಕ್ಷ ಮಹಾಲಿಂಗಪ್ಪ ಸನದಿ, ಮದಭಾಂವಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಸವರಾಜ ನಾಗನೂರ, ಬಿಜೆಪಿ ಮುಖಂಡರಾದ ಜಿ. ಎಸ್. ಗೊಂಬಿ, ಗುರುಪಾದ ಅಂಬಿ, ಶಿವಾನಂದ ಅಂಗಡಿ, ವಿಜಯ ಸಬಕಾಳೆ, ರಾಜು ತಾಳಿಕೋಟಿ, ಪ್ರಕಾಶ ಚನ್ನಾಳ, ಯಮನು ಉಪ್ಪಾರ, ರಾಮನಗೌಡ ಪಾಟೀಲ, ಸಂಜು ಬಾರಕೋಲ, ಮಾರುತಿ ಕರೋಶಿ, ಪ್ರಭು ಸತ್ತಿಗೇರಿ, ಭೀಮಸಿ ಗೌಂಡಿ, ಬಸವರಾಜ ಯರಗಟ್ಟಿ, ಭರತ ಕದ್ದಿಮನಿ, ರವಿ ಗಿರಿಸಾಗರ, ಮಹೇಶ ಜಿಡ್ಡಿಮನಿ, ಆನಂದ ಪವಾರ, ವಿಜಯ ಕಂಬಾರ ಸೇರಿದಂತೆ ಇನ್ನೂ ಹಲವರು ಭಾಗವಹಿಸಿದ್ದರು.

# ಯೋಗದಿಂದ ವ್ಯಸನ ಮುಕ್ತ ಸಮಾಜ ನಿರ್ಮಾಣ ಸಾಧ್ಯ; ಸದಾಶಿವ ಗುರೂಜಿ



**ಮಹಾಲಿಂಗಪುರ :** ಯೋಗದಿಂದ ವ್ಯಸನಮುಕ್ತ ಸಮಾಜ ನಿರ್ಮಿಸಲು ಸಾಧ್ಯವಿದೆ ಎಂದು ಋಷಿ ಯೋಗಾಶ್ರಮದ ಸದಾಶಿವ ಗುರೂಜಿ ಹೇಳಿದರು.

ಸಮೀಪದ ರನ್ನಬೆಳಗಲಿ ಪಟ್ಟಣದ ಬಂದಲಕ್ಷ್ಮಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡ ಅಂತರಾಷ್ಟ್ರೀಯ ಹನ್ನೊಂದನೇ ಯೋಗ ದಿನಾಚರಣೆಯಲ್ಲಿ ಯೋಗದ ಮಾರ್ಗದರ್ಶನ ನೀಡಿ ಮಾತನಾಡಿದ ಅವರು, ಪ್ರತಿನಿತ್ಯ ಯೋಗ ಮಾಡುವುದರಿಂದ ಶರೀರ ಆರೋಗ್ಯದ ಜೊತೆಗೆ ಮಾನಸಿಕ ಸಧೃಢತೆ ಸಾಧಿಸಲು ಸಾಧ್ಯವಾಗುತ್ತದೆ. ಯುವಕರು ದುಶ್ಚಟಗಳಿಂದ ದೂರವಿರಲು ಯೋಗವು ಸಹಕಾರಿಯಾಗಿರುವದರಿಂದ ಯುವಕರು ನಿತ್ಯ ಯೋಗಾಭ್ಯಾಸ ಮಾಡುವದರೊಂದಿಗೆ ಆರೋಗ್ಯಪೂರ್ಣ ನವಸಮಾಜ ನಿರ್ಮಾಣಕ್ಕೆ ಸಹಕರಿಸಬೇಕು ಎಂದರು.

ಈ ಸಂದರ್ಭದಲ್ಲಿ ಯೋಗಾಚಾರ್ಯ ಸದಾಶಿವ ಗುರೂಜಿ ಅವರನ್ನು ಸನ್ಮಾನಿಸಿದರು.

ಪಂಡಿತ ಪೂಜಾರಿ, ಸಿದ್ದು ಪಾಟೀಲ, ಮಹಾಲಿಂಗಪ್ಪ ಗುಂಜಿಗಾಂವಿ, ಶಿವನಗೌಡ ಪಾಟೀಲ, ಮಹಾಲಿಂಗಪ್ಪಗೌಡ ಪಾಟೀಲ, ಸದಾಶಿವ ಹೊಸಟ್ಟಿ, ಕೆ.ಬಿ.ಕುಂಬಾಳೆ, ರಾಮನಗೌಡ ಪಾಟೀಲ, ಮಹಾಲಿಂಗ ಕುಂಬಾರ, ಪರಮಾನಂದ ಸಂಕ್ರಟ್ಟಿ, ಸಂಗಪ್ಪ ರಾಮದುರ್ಗ ವಿವಿಧ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಹಲವರು ಯೋಗಾಭ್ಯಾಸದಲ್ಲಿ ಭಾಗವಹಿಸಿದ್ದರು.

# ಮೂಡಲಗಿಯಲ್ಲಿ ವಿಶ್ವ ಸಂಗೀತ ದಿನಾಚರಣೆ

**ವರದಿ: ಭಾಗೀರಥಿ ಎಸ್. ಕುಳಲಿ.**

ಕನ್ನಡ ಸಾಹಿತ್ಯ ಪರಿಷತ್ತು ತಾಲೂಕ ಘಟಕ ಮೂಡಲಗಿ ಹಾಗೂ ಜ್ಞಾನ ದೀಪ್ತಿ ಫೌಂಡೇಶನ್ ಇವುಗಳ ಸಹಯೋಗದಲ್ಲಿ ಮೂಡಲಗಿ ಪಟ್ಟಣದ ಪೋಲೀಸ್ ಠಾಣೆಯ ಆವರಣದಲ್ಲಿರುವ ಹನುಮಾನ್ ದೇವಸ್ಥಾನದಲ್ಲಿ ವಿಶ್ವ ಸಂಗೀತ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸೋಮಶೇಖರ ಕಂಠೀಕಾರ ಸಂಗೀತವು ಮಾತಿನಲ್ಲಿ ವ್ಯಕ್ತಪಡಿಸಲಾಗದ ಮತ್ತು ಮೌನವಾಗಿರಲು ಸಾಧ್ಯವಾಗದನ್ನು ವ್ಯಕ್ತಪಡಿಸುತ್ತದೆ.

ಇಂತಹ ಸಂಗೀತ ಇವತ್ತು ನಮ್ಮನ್ನು ಖಿನ್ನತೆ ಮತ್ತು ಚಿಂತೆಗಳಿಂದ ಮೇಲೆತ್ತಿ ಪರಿಪೂರ್ಣ ವ್ಯಕ್ತಿಯನ್ನಾಗಿಸಿ ವಿಶ್ವ ಭಾಷೆಯಾಗಿ ವಿಜೃಂಭಿಸುತ್ತಿದೆ ಎಂದು ಹೇಳಿದರು

ಈ ಸಂದರ್ಭದಲ್ಲಿ ಪ್ರಶಾಂತ ಮಲ್ಲನಗೌಡ, ಅರ್ಜುನ್ ಕಾಂಬಳೆ, ಮಾರುತಿ ಗೌಡರ, ಹಾಗೂ ಕುಮಾರಿ ಪಲ್ಲವಿ ಕಂಠಿಕಾರರು ತಮ್ಮ ಸುಮಧುರ ಗಾಯನದ ಮೂಲಕ ಎಲ್ಲಾ ಪ್ರೇಕ್ಷಕ ಬಂಧುಗಳಿಗೆ ಸಂಗೀತ ರಸದೌತಣ ಊಣ ಬಡಿಸಿದರು.

ಅಧ್ಯಕ್ಷತೆಯನ್ನು ಕ.ಸಾ.ಪ. ಅಧ್ಯಕ್ಷ ಡಾ. ಸಂ–ಜಯ್ ಶಿಂದಿಹಟ್ಟಿ ವಹಿಸಿಕೊಂಡಿದ್ದರು. ಕ.ಸಾ.ಪ. ಕಾರ್ಯದರ್ಶಿ ಬಿ. ಆರ್. ತರಕಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಚ್. ವಂಟಗುಡಿ ಸ್ವಾಗತಿಸಿದರು. ಲಂಕ್ಯಪ್ಪನವರ ಸೊಗಸಾಗಿ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಮಹಾವೀರ ಸಲ್ಲಾಗೋಳ, ಸಂತೋಷ್ ಪಾಟೀಲ್, ತಿಮ್ಮಣ್ಣ ಯಾದವಾಡ, ಅಪ್ಪಣ್ಣ ಮುಗಳಖೋಡ, ವೆಂಕಟೇಶ ಬಡಿಗೇರ, ವೀರಭದ್ರಪ್ಪ ಮಿಲಾನಟ್ಟಿ, ಶ್ರೀಮತಿ ಭಾಗೀರಥಿ ಕುಳಲಿಯವರು ಉಪಸ್ಥಿತರಿದ್ದರು.

# ಊಟಕ್ಕೆ ಕುಳಿತಿದ್ದಾಗಲೇ ಹೃದಯಾಘಾತ; ಕುಳಿತಲ್ಲೇ ಕುಸಿದುಬಿದ್ದ ಯುವಕ ಸಾವು

**ಹಾಸನ :** ಇತ್ತೀಚಿನ ದಿನಗಳಲ್ಲಿ ಹೃದಯಾಘಾತದಿಂದ ಬಲಿಯಾಗುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಸಣ್ಣ ವಯಸ್ಸಿನವರೇ ಹೃದಯಾಘಾತದಿಂದ ಸಾವನ್ನಪ್ಪುತ್ತಿರುವುದು ಆತಂಕಕಾರಿಯಾಗಿದೆ. ಊಟಕ್ಕೆ ಕುಳಿತಿದ್ದ ವ್ಯಕ್ತಿಯೊಬ್ಬ ಎದೆನೋವೆಂದು ಹೇಳುತ್ತಿದ್ದಂತೆಯೇ ಕುಸಿದು ಬಿದ್ದು ಸಾವನ್ನಪ್ಪಿರುವ ಘಟನೆ ಹಾಸನದಲ್ಲಿ ನಡೆದಿದೆ.

ಹಾಸನ ನಗರದ ಸತ್ಯಮಂಗಲ ಬಡಾವಣೆಯ 35 ವರ್ಷದ ಚೇತನ್ ಹೃದಯಾಘಾತದಿಂದ ಸಾವನ್ನಪ್ಪಿದವರು. ಕಿಕ್ಕೇರಿ ಮೂಲದ ಚೇತನ್ ಹಾಸನದ ಹಳೇ ಬಸ್‌ನಿಲ್ದಾಣದ ಬಳಿ ಮೊಬೈಲ್ ಅಂಗಡಿ ಇಟ್ಟುಕೊಂಡಿದ್ದರು. ಸತ್ಯಮಂಗಲ ಬಡಾವಣೆಯಲ್ಲಿ ಪತ್ನಿ ಹಾಗೂ ಮಗುವಿನೊಂದಿಗೆ ವಾಸವಾಗಿದ್ದರು. ರಾತ್ರಿ ಅಂಗಡಿ ಬಾಗಿಲು ಹಾಕಿಕೊಂಡು ಮನೆಗೆ ಚೇತನ್ ಮನೆಗೆ ಬಂದಿದ್ದರು. ಈ ವೇಳೆ ಅವರ ಪತ್ನಿ ಊಟಕ್ಕೆ ಕರೆದಿದ್ದು, ಊಟಕ್ಕೆ ಕುಳಿತುಕೊಳ್ಳುವಾಗ ದಿಢೀರ್ ಎದೆನೋವು ಕಾಣಿಸಿಕೊಂಡಿದೆ. ಎದೆ ನೋಯುತ್ತಿದೆ ಎಂದು ಪತ್ನಿಗೆ ಹೇಳಿ, ಮೇಲೆ ಎದ್ದೇಳುವಾಗಲೇ ಕುಸಿದು ಬಿದ್ದಿದ್ದಾರೆ. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಅಷ್ಟರಲ್ಲಿ ಚೇತನ್ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.

# ದೇಹ, ಮನಸ್ಸಿನ ಸದೃಢತೆಗಾಗಿ ಯೋಗ ಅಗತ್ಯ



**ರಬಕವಿ–ಬನಹಟ್ಟಿ :** ದೇಹ ಮತ್ತು ಮನಸ್ಸನ್ನು ಸದೃಢವಾಗಿಡಲು ಯೋಗಭ್ಯಾಸ ಮಾಡುವುದು ಅಗತ್ಯವಾಗಿದೆ. ಈ ಬಾರಿಯ ಯೋಗವನ್ನು ಒಂದು ಭೂಮಿಗಾಗಿ ಯೋಗ, ಮತ್ತು ಆರೋಗ್ಯ ಎಂಬ ಉದ್ದೇಶದೊಂದಿಗೆ ಆಚರಣೆ ಮಾಡಲಾಗುತ್ತಿದೆ ಎಂದು ಇಲ್ಲಿನ ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶ ಆಶಪ್ಪ ಸಣಮನಿ ತಿಳಿಸಿದರು.

ಅವರು ಶನಿವಾರ ನ್ಯಾಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಇರುವ ಭೂಮಿಯನ್ನು ಮತ್ತು ಪರಿಸರವನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಈ ದಿಶೆಯಲ್ಲಿ ಜನಜಾಗೃತಿಯನ್ನು ಮೂಡಿಸುವುದು ಅಗತ್ಯವಾಗಿದೆ ಎಂದು ನ್ಯಾಯಾಧೀಶ ಸಣಮನಿ ತಿಳಿಸಿದರು. ಯೋಗ ಗುರು ಎಂ. ಬಿ. ಶೆಟ್ಟಿ ಮಾತನಾಡಿ, ಪ್ರತಿಯೊಂದು ಹುದ್ದೆಯಲ್ಲಿರುವ ವ್ಯಕ್ತಿಗೆ ಯೋಗ ಅಗತ್ಯವಾಗಿದೆ.

ಯೋಗಕ್ಕೆ ಯಾವುದೆ ಮೇಲು ಕೀಳು, ಬಡವ, ಶ್ರೀಮಂತ, ಜಾತಿ ಧರ್ಮ ಎಂಬ ಬೇಧ ಭಾವ ಇಲ್ಲ. ವಿಶ್ವಕ್ಕೆ ಭಾರತೀಯರು ನೀಡಿದ ಮಹಾನ್ ಕೊಡುಗೆ ಅದು ಯೋಗ ಎಂಬುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಕಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶೆ ಸೌಮ್ಯಾ ಹೂಲಿ, ಹಿರಿಯ ವಕೀಲರಾದ ಎಂ.ಜಿ.ಕೆರೂರ, ಸುರೇಶ ಗೊಳಸಂಗಿ, ಎಸ್. ಎಂ. ಫಕೀರಪೂರ, ವಿನೋದ ಪತ್ತಾರ, ಶಿಕ್ಷಣ ಸಂಯೋಜಕ ಬಿ. ಎಂ. ಹಳೆಮನಿ, ಶಾಂತವೀರ ಬಾಣಕಾರ ಸೇರಿದಂತೆ ನ್ಯಾಯಾಲಯದ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

## ಪ್ರಧಾನಮಂತ್ರಿ ಆವಾಸ ಯೋಜನೆಯಡಿ 2,257 ಗುಂಪು ಮನೆಗಳ ಹೊಸ ವಿಸ್ತೃತ ಯೋಜನಾ ವರದಿ ಅನುಮೋದನೆಗೆ ಸಿಎಂಗೆ ಯತ್ನಾಳ ಪತ್ರ



**ವಿಜಯಪುರ :** ವಸತಿ ರಹಿತ ಬಡ ಫಲಾನುಭವಿಗಳಿಗೆ ಅನುಕೂಲ ಕಲ್ಪಿಸಿಕೊಡಲು ಪ್ರಧಾನಮಂತ್ರಿ ಅವಾಸ ಯೋಜನೆಯಡಿ 2,257 ಗುಂಪು ಮನೆಗಳ ಹೊಸ ವಿಸ್ತೃತ ಯೋಜನಾ ವರದಿ (ಡಿಪಿಆರ್)ಗೆ ವಿಜಯಪುರ ಜಿಲ್ಲೆಯಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ, ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಪತ್ರ ಬರೆದಿದ್ದಾರೆ.

ಪ್ರಧಾನಮಂತ್ರಿ ಆವಾಸ ಯೋಜನೆಯಡಿ ವಿಜಯಪುರ ನಗರಕ್ಕೆ ಮಂಜೂರಾದ 3,750 ಮನೆಗಳ ಪೈಕಿ ಈಗಾಗಲೇ 1,493 ಮನೆಗಳು ಅನುಮೋದನೆಗೊಂಡು ಕಟ್ಟಡ ಕಾಮಗಾರಿ ಪ್ರಾರಂಭವಾಗಿ ಅಂತಿಮ ಹಂತದಲ್ಲಿದ್ದು, ಇನ್ನೂ ಸಾಕಷ್ಟು ಬಡ ಫಲಾನುಭವಿಗಳಿಗೆ ಬಾಕಿ ಉಳಿದ 2,257 ಮನೆಗಳು ಅವಶ್ಯಕತೆ ಇರುತ್ತದೆ. ಈಗಾಗಲೇ ಈ ಬಡ ಫಲಾನುಭವಿ ಕುಟುಂಬಗಳು ಮನೆಗಳಿಗಾಗಿ ಅರ್ಜಿಯನ್ನು ಸಲ್ಲಿಸಿದ್ದು, ಈ ಫಲಾನುಭವಿಗಳನ್ನು ಆಶ್ರಯ ಸಮಿತಿಯಲ್ಲಿ ಆಯ್ಕೆ ಮಾಡಲಾಗಿದೆ.

ಪ್ರಸ್ತುತ ನಿರ್ಮಾಣಗೊಳ್ಳುತ್ತಿರುವ 1,493 ಮನೆಗಳು ಮಹಾನಗರ ಪಾಲಿಕೆಯ ಜಾಗದಲ್ಲಿ ಜಿ+2 ಮಾದರಿಯಲ್ಲಿ 800 ಮನೆಗಳನ್ನು ನಿರ್ಮಾಣ ಮಾಡಬಹುದಾಗಿದೆ. ಅದರಂತೆ ಮಹಾನಗರ ಪಾಲಿಕೆ ಒಡೆತನದ ಸರ್ವೆ ನಂ.156ರ ಭೂತನಾಳ ಕೆರೆ ಹತ್ತಿರ 35.13 ಎಕರೆ ಜಮೀನು ಲಭ್ಯವಿದ್ದು, ಇದನ್ನು ಆಶ್ರಯ ಮನೆ ನಿರ್ಮಾಣಕ್ಕಾಗಿ ಕಾಯ್ದಿರಿಸಲಾಗಿದ್ದು, ಇಲ್ಲಿಯೂ ಸಹ ಬಾಕಿ ಉಳಿದ ಮನೆಗಳನ್ನು ನಿರ್ಮಾಣ ಮಾಡಬಹುದಾಗಿದೆ.

ಹೀಗಾಗಿ ಬಾಕಿ ಉಳಿದ 2257 ಮನೆಗಳ ಹೊಸ ನಿರ್ಮಾಣದ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಅನುಮೋದನೆ ನೀಡಿ, ವಿಜಯಪುರ ನಗರ ಹಾಗೂ ನಾಗಠಾಣ ಮತಕ್ಷೇತ್ರದ ವಸತಿ ರಹಿತ ಬಡ ಫಲಾನುಭವಿಗಳಿಗೆ ಅನುಕೂಲ ಕಲ್ಪಿಸಿಕೊಡಲು ಪತ್ರದಲ್ಲಿ ತಿಳಿಸಿದ್ದಾರೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹಾಗೂ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರಿಗೂ ಪತ್ರ ಬರೆಯಲಾಗಿದೆ ಎಂದು ನಗರ ಶಾಸಕರ ಸಾರ್ವಜನಿಕ ಸಂಪರ್ಕ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಮಾದಕ ವಸ್ತು ಇಡೀ ಜೀವನವೇ ನಾಶ ಮಾಡುತ್ತದೆ: ಸಿಪಿಐ



**ತಾಳಿಕೋಟೆ :** ಇಂದಿನ ಆಧುನಿಕ ಭರಾಟೆಯಲ್ಲಿರುವ ಯುವ ಸಮೂಹ ಸಿಗರೇಟ್, ಗುಟಕಾ, ತಂಬಾಕು, ಗಾಂಜಾ, ಅಲ್ಲದೇ ಇನ್ನಿತರ ಮಾದಕ ವಸ್ತುಗಳನ್ನು ತಮ್ಮ ಪ್ಯಾಶನ್ ರೀತಿಯಲ್ಲಿ ಬಳಸಿಕೊಳ್ಳುತ್ತಾ ತಮ್ಮ ಇಡೀ ಜೀವನವನ್ನೇ ಬಲಿ ಕೊಡುತ್ತಾ ಸಾಗಿರುವದು ದುರದೃಷ್ಠಕರವಾದ ಸಂಗತಿಯಾಗಿದೆ ಇಂತಹ ಮಾದಕ ವಸ್ತುಗಳ ಸೇವನೆಯಿಂದ ವಿದ್ಯಾರ್ಥಿಗಳು ದೂರವಿದ್ದು ತಮ್ಮ ಜೀವನವನ್ನು ಸುಂದರಗೊಳಿಸಿಕೊಳ್ಳಬೇಕೆಂದು ಸಿಪಿಐ ಮಹ್ಮದ ಫಶುಉದ್ದೀನ್ ಅವರು ಹೇಳಿದರು.

ಪಟ್ಟಣದ ಶ್ರೀ ಖಾಸ್ಗತೇಶ್ವರ ಪಧವಿ ಪೂರ್ವ ಮಹಾ ವಿದ್ಯಾಲಯದ ಆವರಣದಲ್ಲಿ ಸ್ಥಳೀಯ ಪೊಲೀಸ್ ಠಾಣೆಯವತಿಯಿಂದ ಏರ್ಪಡಿಸಲಾದ ಮಾದಕ ವಸ್ತು ನಿಷೇದ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ಅವರು ಮಾದಕ ವಸ್ತುಗಳ ಚಟಕ್ಕೆ ಒಮ್ಮೆ ದಾಸರಾದರೆ ಅದರಿಂದ ಹೊರಬರಲು ಬಹಳೇ ಕಷ್ಟದಾಯಕವಾಗಿದೆ ಕೆಲವು ಕಡೆಗಳಲ್ಲಿ ಯುವಕರು ಒಂದು ಚಟ ತೇಜಿಸಲು ಮತ್ತೊಂದು ಚಟಕ್ಕೆ ದಾಸರಾಗುತ್ತಾರೆ ನಿಷೇದಿತಗೊಂಡಿರುವ ಯಾವುದೇ ಮಾದಕ ವಸ್ತುಗಳಾದರೂ ಕೂಡಾ ಜೀವಕ್ಕೆ ಕಂಟಕವಾಗಿವೆ ವಿದ್ಯಾರ್ಥಿ ಜೀವನವೆಂಬುದು ಸುಂದರ ಜೀವನವಾಗಿ ಈ ಸಮಯದಲ್ಲಿ ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಸಮಯವಾಗಿದೆ ಇಂತಹ ಮಾದಕವಸ್ತುಗಳ ಚಟಕ್ಕೆ ದಾಸರಾಗದೇ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದ ಅವರು ಇಂದಿನ ದಿನಮಾನದಲ್ಲಿ ಸೈಬರ್ ಕ್ರೈಂ ಎಂಬ ಪೇಡಂಭೂತಕ್ಕೆ ಸಾಕಷ್ಟು ಜನರು ವಂಚನೆಗೊಳಗಾಗುತ್ತಿದ್ದಾರೆ ಸಂಪರ್ಕಕ್ಕೆ ಸಿಗದ ಕರೆಗಳ ಮೂಲಕ ಓಟಿಪಿ ಪಡೆದು ಹಣವನ್ನು ವಂಚಿಸಿರುವ ಪ್ರಕರ್ಣಗಳು ಕಂಡುಬರುತ್ತಿವೆ ಸಾಮಾಜಿಕ ಜಾಲತಾಣಗಳನ್ನು ಬಳೆಸುವಾಗಲೂ ಎಚ್ಚರವಹಿಸಬೇಕೆಂದು ತಿಳಿಹೇಳಿದ ಅಧಿಕಾರಿ ಮಹ್ಮದ ಪಶುಉದ್ದೀನ್ ಅವರು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಮೊದಲು ರಸ್ತೆ ನಿಯಮಗಳನ್ನು ತಿಳಿದುಕೊಳ್ಳಬೇಕು ಇಂದು ಬೆಳೆಯುತ್ತಿರುವ ನಗರಗಳಲ್ಲಿ ಸಂಚರಿಸುವಾಗ ಏಚ್ಚರವಹಿಸಬೇಕೆಂದು ಅವರು ಇನ್ನೂ ವಯಸ್ಕರಾಗದ ಮಕ್ಕಳನ್ನು ಮಧುವೆ ಮಾಡುವದು ಅಪರಾದವಾಗಿದೆ ಬಾಲ್ಯವಿವಾಹ ನಿಷೇದ ಕಾಯ್ದೆ ಅತ್ಯಂತ ಕಠಿಣವಾದುದ್ದಾಗಿದೆ ಇನ್ನೂ ತಿಳುವಳಿಕೆ ಇಲ್ಲದ ಮಕ್ಕಳಿಗೆ ಮಧುವೆ ಮಾಡುವದರಿಂದ ವಯಸ್ಕರಾದ ಮೇಲೆ ಮನೆಯಲ್ಲಿ ಸಮಸ್ಯೆಗಳ ಸರಮಾಲೆಯಿಂದಲೇ ಸಾಕಷ್ಟು ಕಡೆಗಳಲ್ಲಿ ಬಿಡುಗಡೆ ಹಂತಕ್ಕೆ ಬಂದಿರುವದು ಕಂಡಿದ್ದೇವೆಂದ ಅವರು ಯಾವುದೇ ರೀತಿಯ ಸಮಸ್ಯೆಗಳು ಕಂಡು ಬಂದಲ್ಲಿ ಮಕ್ಕಳ ಸಹಾಯ ವಾಣಿ 1930ಗೆ ಕರೆ ಮಾಡಿ ಮಾಹಿತಿ ನೀಡಬೇಕು ನಿಮ್ಮ ಸಹಾಯಕ್ಕೆ ಪೊಲೀಸ್ ಇಲಾಖೆ ಸದಾ ಕೆಲಸ ಮಾಡುತ್ತದೆ ಎಂದು ಹೇಳಿದ ಅವರು ಲೈಂಗಿಕ ಕಿರುಕುಳ, ಮತ್ತು ಪೋಕ್ಸೋ ಕಾಯ್ದೆ, ಮಹಿಳೆಯರ ರಕ್ಷಣೆ, ಮಾದಕ ವಸ್ತುಗಳ ವೆಸನ ಕುರಿತು ಅಲ್ಲದೇ ಕಾನೂನಿನ ಬಗ್ಗೆ ವಿಧ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

ಈ ಕಾರ್ಯಕ್ರಮದಲ್ಲಿ ಎಎಸ್‌ಐ ಸಂಜೀವ ಬಾಗೇವಾಡಿ, ಎಸ್.ಕೆ.ಪಿಯು ಕಾಲೇಜ್ ಅಧ್ಯಕ್ಷ ಎಂ.ಆರ್.ಕತ್ತಿ, ಎಸ್.ಕೆ.ಪ್ರೌಢ ಶಾಲೆಯ ಅಧ್ಯಕ್ಷ ಎಂ.ಸಿ.ಕತ್ತಿ, ಪಿಯು ಕಾಲೇಜ್ ಪ್ರಾಚಾರ್ಯ ಕೆ.ಕಿಶೋರಕುಮಾರ, ಪ್ರೌಢ ಶಾಲೆಯ ಉಪ ಪ್ರಾಚಾರ್ಯ ಜಗದೀಶ ಕಟ್ಟಿಮನಿ, ಮಹಿಳಾ ಕಾಲೇಜ್ ಪ್ರಾಚಾರ್ಯ ಶ್ರೀಮತಿ ಜೆ.ಸಿ.ಹಿರೇಮಠ, ಉಪನ್ಯಾಸಕ ಎಸ್.ಎಸ್.ನೆಲ್ಲಗಿ, ಪೊಲೀಸ್ ಸಿಬ್ಬಂದಿಗಳಾದ ಎಂ.ಎಲ್.ಪಟ್ಟೇದ, ಸಿದ್ದನಗೌಡ ದೊಡಮನಿ, ರವಿ ಬಿರಾದಾರ, ಬಸವರಾಜ ಹಡಲಗಿ, ರಾಮನಗೌಡ ಬಿರಾದಾರ, ಹಾಗೂ ಪಿಯು ಕಾಲೇಜ್ ಮತ್ತು ಪ್ರೌಢ ಶಾಲಾ ವಿಭಾಗದ ಸಿಬ್ಬಂದಿಗಳು ಮತ್ತು ವಿಧ್ಯಾರ್ಥಿಗಳು ಉಪಸ್ಥಿತರಿದ್ದರು.

# ಅಭಿವೃದ್ಧಿಗೆ ಶ್ರಮ: ಸನ್ಮಾನ



**ಕೊಲ್ಹಾರ :** ಪಟ್ಟಣದ ವಾರ್ಡ್ ಸಂಖ್ಯೆ 16 ರಲ್ಲಿ ವಿವಿಧ ಕಾಮಗಾರಿಗಳು ಹಾಗೂ ಮೂಲಭೂತ ಸೌಲಭ್ಯ ಕಲ್ಪಿಸಲು ಶ್ರಮಿಸಿದ ಪ.ಪಂ ಅಧ್ಯಕ್ಷ ಸಿ.ಎಸ್ ಗಿಡ್ಡಪ್ಪಗೋಳ ಹಾಗೂ ಪ.ಪಂ ಮುಖ್ಯಾಧಿಕಾರಿ ವಿರೇಶ್ ಹಟ್ಟಿ, ಅಭಿಯಂತರ ಸಂಜೀವ್ ಅವರನ್ನು ವಾರ್ಡ್ ಸದಸ್ಯ ತೌಸಿಪ್ ಗಿರಗಾಂವಿ ಹಾಗೂ ವಾರ್ಡ್ ಸಾರ್ವಜನಿಕರು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಜಂಗ್ಲಿಸಾಬ ಹುದ್ದಾರ, ಬನಪ್ಪ ಬಾಲಗೊಂಡ,
ಸಲೀಂ ಕಂಕರಪೀರ, ಮೊಹಮ್ಮದ ಪಕಾಲಿ, ರಫೀಕ ಮನ್ನಾಬಾಯಿ, ಬಸೀರ ವಾಲಿಕಾರ, ಶಬ್ಬೀರ ಜಮನಾ, ಕಾಶೀಂ ಹವಾಲ್ದಾರ, ಸಿದ್ದಿಕ ರಬನಾಳ, ಮುನ್ನಾ ಹವಾಲ್ದಾರ್, ಹೈದರ ಮುಲ್ಲಾ ಹಾಗೂ ಇನ್ನಿತರರು ಇದ್ದರು.

# ಛಲವಾದಿ ಸಮುದಾಯದವರು ಶಿಕ್ಷಣಕ್ಕೆ ಒತ್ತು ನೀಡಬೇಕು: ಸೋಮಲಿಂಗ ಗೆಣ್ಣೂರ



**ಇಂಡಿ :** ಛಲವಾದಿ ಸಮುದಾಯದ ಪ್ರತಿಭಾವನಿತ ಮಕ್ಕಳನ್ನು ಪೊ?ರೀತ್ಸಾಹಿಸುವ ಉದ್ದೇಶದಿಂದ ಛಲವಾದಿ ನೌಕರರ ಸಂಘದಿಂದ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಸತ್ಕಾರ ಸ್ವೀಕರಿಸಿದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದು ಉನ್ನತ ಹುದ್ದೆಗಳನ್ನು ಸ್ವೀಕರಿಸಿ ಸಮಾಜದ ಹಿಂದುಳಿದ ಕುಟುಂಬಗಳನ್ನು ಮೇಲೆತ್ತುವುದರ ಮೂಲಕ ಸಮಾಜದ ಋಣ ತೀರಿಸಬೇಕು ಎಂದು ಛಲವಾದಿ ನೌಕರರ ಸಂಘದ ರಾಜ್ಯಾಧ್ಯಕ್ಷ ಚಿದಾನಂದ ಕಾಂಬಳೆ ಹೇಳಿದರು.

ಅವರು ನಗರದ ಕಂದಗಲ್ಲ ಹಣಮಂತ್ರಾಯ ರಂಗಮಂದಿರಲ್ಲಿ ಛಲವಾದಿ ನೌಕರರ ಸಂಘ ಹಮ್ಮಿಕೊಂಡ ಡಾ, ಬಾಬಾಸಾಹೇಬ್ ಅಂಬೇಡ್ಕರ್ ಅವರ 134ನೇ ಜಯಂತೋಸ್ತವ ಕಾರ್ಯಕ್ರಮದಲ್ಲಿ ಛಲವಾದಿ ಸಮುದಾಯದ ವಿದ್ಯಾರ್ಥಿಗಳ ಪ್ರತಿಭಾ ಪುರಷ್ಕಾರ ಹಾಗೂ ನಿವೃತ್ತ ನೌಕರರ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಛಲವಾದಿ ಸಮುದಾಯದ ರಾಜಕಾರಣಿಗಳು ಛಲವಾದಿ ಸಮುದಾಯದ ಕಾರ್ಯಕ್ರಮಗಳಿಗೆ ಬರದೆ ಅಸಡ್ಡೆ ಭಾವ ತೋರುತ್ತಿದ್ದು, ಇದು ಅಂಬೇಡ್ಕರ ಅವರ ಸಿದ್ದಾಂತಕ್ಕೆ ವಿರೋಧವಾಗಿದೆ ಎಂದು ಹೇಳಿದರು.

ಮುಂಬರುವ ದಿನಗಳಲ್ಲಿ ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಛಲವಾದಿ ನೌಕರ ಸಂಘದಿಂದ ಶಿಕ್ಷಣಕ್ಕೆ ಒತ್ತು ನೀಡಿ ಮಕ್ಕಳಿಗೆ ಹುರಿದುಂಬಿಸುವುದಕ್ಕಾಗಿ ಪ್ರತಿಭಾ ಪುರಷ್ಕಾರ ಹಾಗೂ ಶೈಕ್ಷಣಿಕ ಜಾಗ್ರತಿ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತದೆ. ನೌಕರರ ಕಾರ್ಯಕ್ರಮಕ್ಕೆ ಬೆಂಬಲ ನೀಡಿದ ಎಲ್ಲ ದಲಿತ ಪರ ಸಂಘಟನೆ ಪದಾಧಿಕಾರಿಗಳು, ಮುಖಂಡರಿಗೆ ಸಂಘದವತಿಯಿಂದ ಅಭಿನಂದಿಸುದಾಗಿ ಹೇಳಿದರು.

ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಮಾತನಾಡಿ, ಛಲವಾದಿ ವಿದ್ಯಾರ್ಥಿಗಳು ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಬೇಕು. ಬುದ್ದ, ಬಸವ,ಅಂಬೇಡ್ಕರ ಅವರ ವಿಚಾರಧಾರೆಗಳನ್ನು ಜೀವನದ ಅಳವಡಿಸಿಕೊಂಡು ಮುನ್ನುಗ್ಗಬೇಕು. ಛಲವಾದಿ ನೌಕರ ಸಂಘದ ವತಿಯಿಂದ ಪ್ರತಿಭಾ ಪುರಷ್ಕಾರ ಹಮ್ಮಿಕೊಂಡಿರುವುದು ಶ್ಲಾಘನೀಯವಾದದ್ದು ಎಂದು ಹೇಳಿದರು.

ಉದ್ದೀಮೆದಾರ ಸುಧೀಪಕುಮಾರ ಪಿ ಮಾತನಾಡಿ, ಮುಂಬರುವ ವರ್ಷದಲ್ಲಿ ಛಲವಾದಿ ವಿದ್ಯಾರ್ಥಿಗಳು ಉನ್ನತ ಅಂಕಗಳನ್ನು ಪಡೆದರೆ ನಮ್ಮ ಸಂಸ್ಥೆಯಿಂದ ತಲಾ 10 ಸಾವಿರ ಪೊ?ರೀತ್ಸಾಹ ರೂಪದಲ್ಲಿ ನೀಡಲಾಗುತ್ತದೆ ಎಂದು ಘೋಷಿಸಿದರು. ವನಾಕ್ಷಿ ಚಲವಾದಿ ಮಾತನಾಡಿದರು.

ಜ್ಞಾನಜ್ಯೋತಿ ಬಂತೇಜಿ, ಬಸವನಾಗದೇವ ಶರಣರು ಸಾನಿಧ್ಯ ವಹಿಸಿದ್ದರು.

ಅಭಿಷೇಕ ಚಕ್ರವರ್ತಿ,ಪರಶುರಾಮ ಲಂಬು, ಎಚ್.ಬಿ.ಸಿಂಗ್ಯಾಗೋಳ, ಬಾಬು ಗುಡಮಿ, ಸಂತೋಷಕುಮಾರ ಪಿರಗಾ, ಕೆ.ಬಿ.ಕೊರೆ, ಸುರೇಶ ದುಲಾರಿ,ಕುಮಾರ ಬಾಗೇವಾಡಿ, ರವೀಂದ್ರ ಈರಸುರ,ಯುವರಾಜ ನಾಟಿಕಾರ,ಅಶೋಕ ಚಲವಾದಿ, ಆರತಿ ಮಲ್ಲಾರಿ, ಸುಜಾತಾ ಚಂಚಲಕರ,ದುರ್ಗಪ್ಪಚಲವಾದಿ, ರವಿಕಾಂತ, ರಾಕೇಶ ಇಂಗಳಗಿ, ಸತೀಶ ಹಿಮಕರ , ಶ್ರೀಧರ ಕಲಿವೀರ,ಅಶೋಕ ಗೊಣಸಗಿ, ಶಶಿಕಾಂತ ಎಸ್ ಸೊನ್ನದ, ಶ್ರೀನಿವಾಸಪ್ಪ, ಸಾಬು ಮಮದಾಪೂರ ,ಶಿವಲಿಂಗ ಕುರೆನ್ನವರ, ಪೊ?ರ.ಹೇಮಗಿರಿ,ಬಸವರಾಜ ಸಿಂಗೆ ಮೊದಲಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು

ಇದೆ ಸಂದರ್ಭದಲ್ಲಿ ಎಸ್‌ಎಸ್ ಎಲ್‌ಸಿ ,ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಛಲವಾದಿ ವಿದ್ಯಾರ್ಥಿಗಳಿಗೆ ಹಾಗೂ ನಿವೃತ್ತ ನೌಕರರಿಗೆ ಸನ್ಮಾನಿಸಲಾಯಿತು.



## ಮಕ್ಕಳೊಂದಿಗೆ ಯೋಗ ಮಾಡಿದ ಜಿಲ್ಲಾ ಉಸ್ತುವಾರಿ ಸಚಿವರು

**ಮಹಾಲಿಂಗಪುರ:** ಸಮೀಪದ ನಾಗರಾಳ ಸರ್ಕಾರಿ ಪ್ರೌಢ ಶಾಲೆಯಲ್ಲಿ ಜರುಗಿದ ಯೋಗಾ ದಿನಾಚರಣೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಮಕ್ಕಳೊಂದಿಗೆ ಯೋಗ ಮಾಡಿದರು.

## ಹಿಪ್ಪರಗಿ ಜಲಾಶಯಕ್ಕೆ 85 ಸಾವಿರ ಕ್ಯೂಸೆಕ್ ನೀರು



**ರಬಕವಿ-ಬನಹಟ್ಟಿ :** ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶಗಳಲ್ಲಿ ಭಾರೀ ಮಳೆಯಾಗುತ್ತಿದ್ದು ಕೃಷ್ಣಾ ನದಿಯ ಉಪ ನದಿಗಳು ಕೂಡಾ ತುಂಬಿ ಹರಿಯುತ್ತಿರುವುದರಿಂದ ಸಮೀಪದ ಹಿಪ್ಪರಗಿಯ ಬ್ಯಾರೇಜಿಗೆ ಭಾನುವಾರ 85 ಸಾವಿರ ಕ್ಯೂಸೆಕ್ ಒಳ ಹರಿವು ಇದ್ದು, ಅಷ್ಟೇ ಪ್ರಮಾಣದ ನೀರಿನ ಹೊರ ಹರಿವು ಕೂಡಾ ಇದೆ ಎಂದು ಜಮಖಂಡಿಯ ಕಂದಾಯ ಉಪವಿಭಾಗಾಧಿಕಾರಿಣಿ ಶ್ವೇತಾ ಬೀಡಿಕರ್ ತಿಳಿಸಿದರು.

ಬ್ಯಾರೇಜಿನಲ್ಲಿ ನೀರಿನ ಮಟ್ಟವು 521.08 ಮೀಟರ್ ಇದೆ. ನೀರಿನ ಒಳ ಹರಿವು ಹೆಚ್ಚಾಗುತ್ತಿದ್ದು, ನೀರನ್ನು ಸರಾಗವಾಗಿ ಹರಿದು ಬಿಡುತ್ತಿರುವುದರಿಂದ ಯಾವದೇ ಸಂಗ್ರಹಣೆ ಮಾಡುತ್ತಿಲ್ಲ ಎಂದು ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ್ ತಿಳಿಸಿದರು.

## 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳಕ್ಕೆ ಬಳ್ಳಾರಿ ಜಿಲ್ಲೆಯನ್ನು ಸಜ್ಜುಗೊಳಿಸಿ: ಕನ್ನಡ ನಾಡು ರೈತ ಸಂಘದ ಮೆಣಸಿನ ಈಶ್ವರಪ್ಪ



**ಬಳ್ಳಾರಿ :** ಇದೇ ಡಿಸೆಂಬರ್ ನಲ್ಲಿ ಬಳ್ಳಾರಿ ನಗರದಲ್ಲಿ ಜರುಗುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅತ್ಯಂತ ಯಶಸ್ವಿಗೊಳಿಸಲು ಬಳ್ಳಾರಿ ನಗರದ ರಸ್ತೆಯ ತಗ್ಗು ಗುಂಡಿಗಳನ್ನು ಮುಚ್ಚಿ ಎಲ್ಲಾ ವ್ಯವಸ್ಥೆಯನ್ನು ಕಲ್ಪಿಸುವುದರ ಮೂಲಕ ಸಜ್ಜುಗೊಳಿಸಬೇಕಾದ ಅವಶ್ಯಕತೆ ನಮ್ಮ ನಿಮ್ಮ ಮೇಲಿದೆ ಕಾರಣ ಮಹಾನಗರ ಪಾಲಿಕೆ ಅಧಿಕಾರಿಗಳು ಈ ಕುರಿತು ಕ್ರಮ ಕೈಗೊಂಡು ಸಮ್ಮೇಳನಕ್ಕೆ ಯಾವುದೇ ತೊಂದರೆ ಆಗದಂತೆ ನಗರವನ್ನು ಸಜ್ಜುಗೊಳಿಸಬೇಕೆಂದು ಕನ್ನಡ ನಾಡು ರೈತ ಸಂಘದ ಜಿಲ್ಲಾಧ್ಯಕ್ಷ ಮೆಣಸಿನ ಕಾಯಿ ಈಶ್ವರಪ್ಪ ಮನವಿ ಮಾಡಿದರು.

ಅವರಿಂದು ಮಹಾನಗರ ಪಾಲಿಕೆಯಲ್ಲಿ ಮೇಯರ್ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿ ಮಾತನಾಡಿ, ನಮ್ಮ ರೈತ ಸಂಘದ ಹೆಸರನ್ನು ಕನ್ನಡ ನಾಡು ಎಂದು ಇಟ್ಟುಕೊಂಡಿರುವುದಕ್ಕೆ ನಮಗೆ ಅತ್ಯಂತ ಹೆಮ್ಮೆ ಇದೆ ಈ ದೃಷ್ಟಿಯಿಂದ ನಾವು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಳ್ಳಾರಿಯನ್ನು ಅತ್ಯಂತ ಸುಸಜ್ಜಿತ ರೀತಿಯಲ್ಲಿ ರೀತಿಯಲ್ಲಿ ಸಜ್ಜಿಗೊಳಿಸಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇವೆ ಅಷ್ಟೇ ಅಲ್ಲದೆ ನಮ್ಮ ಕನ್ನಡ ನಾಡು ರೈತ ಸಂಘದಿಂದ ಸಮ್ಮೇಳದಲ್ಲಿ ಭಾಗವಹಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ ಎಂದು ಈಶ್ವರಪ್ಪ ತಿಳಿಸಿದರು.

ಈ ಸಂದರ್ಭದಲ್ಲಿ ಕನ್ನಡ ನಾಡು ರೈತ ಸಂಘದ ಪದಾಧಿಕಾರಿಗಳು ಹಲವು ರೈತರ ಮುಖಂಡರುಗಳು ಇದ್ದರು.

# 2ಎ ಮೀಸಲಾತಿ ಹೋರಾಟ: ಮತ್ತೇ ಚುರುಕು

## ಗಳಿಕೆಯ ಸಂಪತ್ತನ್ನು ಬಚ್ಚಿಡದೆ ದಾನದ ರೂಪವಾಗಿ ಸದ್ಬಳಕೆಯಾಗಲಿ



**ರಬಕವಿ-ಬನಹಟ್ಟಿ :** ರಾಜ್ಯದಲ್ಲಿ ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ಸಿಗಬೇಕೆಂಬ ಹೋರಾಟವು ಮತ್ತೇ ಚುರುಕುಗೊಂಡಿದ್ದು, ಜೂನ್ 23 ರಂದು ಉಳವಿಯ ಚನ್ನಬಸವಣ್ಣನ ಕೇಂದ್ರದಲ್ಲಿ ಮಹತ್ವದ ಸಭೆ ನಡೆಯಲಿದ್ದು, ಮತ್ತೇ ಹೋರಾಟದ ರೂಪರೇಷೆಗಳೊಂದಿಗೆ ಸಿದ್ಧತೆ ನಡೆಸಲಾಗುವದೆಂದು ಕೂಡಲಸಂಗಮ ಪೀಠದ ಜಗದ್ಗುರು ಬಸವಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಅವರು ರವಿವಾರ ಇಲ್ಲಿನ ದಾನೇಶ್ವರಿ ಸಮುದಾಯ ಭವನದಲ್ಲಿ ಜರುಗಿದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಹಾಗು ಪ್ರತಿಭಾವಂತ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು. ಲಾಠಿ, ಬೆದರಿಕೆಗೆ ನಾವು ಜಗ್ಗಲ್ಲ.

ರಕ್ತ ಹರಿಸಿಯಾದರೂ ಈ ಬಾರಿ ರಾಜ್ಯದ 2ಎ ಮೀಸಲಾತಿ ಪಡೆದೇ ತೀರುತ್ತೇವೆ. ಸಮಾಜದ ಕಟ್ಟಕಡೆಯ ವ್ಯಕ್ತಿಯ ಬೇಡಿಕೆಗೆ ಸರ್ಕಾರ ಸ್ಪಂದಿಸಲೇಬೇಕೆಂದರು. ಈಗಾಗಲೇ ಜಾತಿಗಣತಿಯಲ್ಲಿ ಕಡ್ಡಾಯವಾಗಿ 'ಪಂಚಮಸಾಲಿ' ಎಂದೇ ಜಾತಿ ಕಾಲಂನಲ್ಲಿ ಬರೆಸಬೇಕೆಂದು ಸಮುದಾಯ ಬಾಂಧವರಿಗೆ ಮಾಹಿತಿ ನೀಡಿದರು.

ಗಳಿಸಿದ ಸಂಪತ್ತನ್ನು ಬಡ ಪ್ರತಿಭಾವಂತರಿಗೆ ದಾನ ಮಾಡಿದ್ದಲ್ಲಿ ಅದಕ್ಕೆ ಶ್ರೇಷ್ಠ ದಾನವೆನ್ನುತ್ತಾರೆ. ಈ ದಾನ ಪ್ರತಿರೂಪವಾಗಿ ಮತ್ತೊಬ್ಬರಿಗೆ ದೊರಕುವದು. ಅದರಂತೆ ಪ್ರಸಕ್ತವಾಗಿ ಉಪಯೋಗ ಪಡೆದಿರುವ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಸಮಾಜದ ಅಭಿವೃದ್ಧಿಗೆ ಶ್ರಮಿಸುವ ಮೂಲಕ ಇಂತಹ ದಾನ ನಿರಂತರವಾಗಿ ಮುನ್ನಡೆದಲ್ಲಿ ಬಡತನ ಹಾಗು ಸಮಸ್ಯೆಗಳ ನಿವಾರಣೆಗೆ ಕಡಿವಾಣದೊಂದಿಗೆ ನೈಜ ಪ್ರತಿಭೆಗಳ ಮೇಲೆ ಬೆಳಕು ಚೆಲ್ಲುವ ಮೂಲಕ ಉತ್ತಮ ದೇಶ ನಿರ್ಮಿಸಲು ಸಾಧ್ಯವೆಂದರು. ದೇವ, ಋಷಿ, ಪಿತೃ, ಮನುಷ್ಯ ಹಾಗು ಭೂತ ಋಣ ತೀರಿಸುವದು ಧಾರ್ಮಿಕ ಕರ್ತವ್ಯ ಇವುಗಳ ಪಾಲನೆ ಪ್ರತಿಯೊಬ್ಬರದೂ ಆಗಬೇಕೆಂದರು.

ಪಂಚಮಸಾಲಿ ಕಾನೂನು ಸಮಿತಿ ರಚನೆಯಾಗಿದ್ದು, ಇದೀಗ ವ್ಯಾಪಾರಸ್ಥರ ಸಂಘವೂ ಸಹಿತ ತಾಲೂಕಾಧ್ಯಕ್ಷ ಶ್ರೀಶೈಲ ಭಾಲಚಂದ್ರ ದಲಾಲ ಅವರ ನೇತೃತ್ವದಲ್ಲಿ ಜಾರಿಯಾಗಿದ್ದು, ವ್ಯವಸಾಯದ ಜೊತೆಗೆ ವ್ಯವಹಾರಕ್ಕೂ ಸಮಾಜದಿಂದ ಉತ್ತೇಜನ ದೊರಕಬೇಕೆಂದು ಶ್ರೀಗಳು ತಿಳಿಸಿದರು.

ವಿಧಾನಪರಿಷತ್ ಸದಸ್ಯ ಹಣಮಂತ ನಿರಾಣಿ ಮಾತನಾಡಿ, ಸನ್ಮಾನಗಳು ಸಾಧನೆಗಳಿಗೆ ಅಂತ್ಯವಲ್ಲ.

ಬದಲಾಗಿ ಮುಂದಿನ ಜವಾಬ್ದಾರಿಯಾಗಿದೆ. ಸರ್ವಾಂಗೀಣ ಅಭಿವೃದ್ಧಿಗೆ ಪಾಲಕರ ಪಾತ್ರ ಮುಖ್ಯವಾಗಿದ್ದು,

ಮೌಲಾಧ್ಯಾರಿತ ಹಾಗು ಸಂಸ್ಕಾರದ ತಳಹದಿಯಲ್ಲಿ ಮಕ್ಕಳನ್ನು ಬೆಳೆಸುವ ಕಾರ್ಯವಾಗಬೇಕೆಂದರು. ರಾಜ್ಯದಲ್ಲಿ 6 ಕೋಟಿ ಜನಸಂಖ್ಯೆ ಇದರಲ್ಲಿ ಕೇವಲ 5.5 ಲಕ್ಷ ಸರ್ಕಾರಿ ನೌಕರಿ. ಕಾರಣ ಎಲ್ಲರೂ ಸರ್ಕಾರಿ ನೌಕರಿಗೆ ಸೀಮಿತವಾಗದೆ ಸ್ವಯಂ ಉದ್ಯೋಗ, ಕೈಗಾರಿಕೆ, ವ್ಯಾಪಾರಕ್ಕೆ ಉತ್ತೇಜನ ನೀಡುವಂತಾಗಬೇಕೆಂದರು.

ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಮಾತನಾಡಿ, ಆರ್ಥಿಕ ಸಮಸ್ಯೆಯಲ್ಲಿರುವ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಮಕ್ಕಳನ್ನು ದತ್ತು ಪಡೆಯುವ ಮೂಲಕ ಅವರ ಹೆಚ್ಚಿನ ವ್ಯಾಸಂಗಕ್ಕೆ ಸಹಕರಿಸುವದಾಗಿ ತಿಳಿಸಿದರು.

ಸಮಾಜದ ಜಿಲ್ಲಾಧ್ಯಕ್ಷ ಧರೆಪ್ಪ ಸಾಂಗ್ಲಿಕರ ಮಾತನಾಡಿ, ದುಶ್ಚಟಗಳಿಂದ ದೂರವಿದ್ದು, ಸಮಾಜದ ಹಿರಿಯರ ಮಾರ್ಗದರ್ಶನದಲ್ಲಿ ಇತರ ಸಮಾಜದೊಂದಿಗೆ ಪ್ರೀತಿಯಿಂದ ನಮ್ಮವರ ಅಭಿಮಾನದಿಂದ ಬೆಳೆಯಬೇಕೆಂದರು.

ಸಮುದಾಯ ಭವನ ನಿರ್ಮಾಣ: ರಬಕವಿ-ಬನಹಟ್ಟಿ ತಾಲೂಕಾ ಪಂಚಮಸಾಲಿ ಸಮುದಾಯ ಭವನ ನಿರ್ಮಾಣ ಮಾಡಲು ತೀರ್ಮಾನಿಸಲಾಯಿತು.

ವಿದ್ಯಾಧರ ಸವದಿ, ಬಾಬಾಗೌಡ ಪಾಟೀಲ, ಲಕ್ಕಪ್ಪ ಪಾಟೀಲ, ಡಿ. ಬಿ. ಜಾಯಗೊಂಡ, ಬಸವರಾಜ ಹನಗಂಡಿ, ಸಿದ್ಧನಗೌಡ ಪಾಟೀಲ, ಮಹಾದೇವ ಧೂಪದಾಳ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ ಶಾಸಕ ನಾರಾ ಭರತ್ ರೆಡ್ಡಿ



**ಬಳ್ಳಾರಿ :** ಬಳ್ಳಾರಿ ಮಹಾನಗರ ಪಾಲಿಕೆಯ ವತಿಯಿಂದ ಕಸ ಸಂಗ್ರಹಿಸುವ ವಿಲೇವಾರಿ ಮಾಡುವ 23 ನೂತನ ವಾಹನಗಳನ್ನು ಶಾಸಕ ನಾರಾಭರತ್‌ರೆಡ್ಡಿ ಲೋಕಾರ್ಪಣೆಗೊಳಿಸಿದರು. ನಲ್ಲಚೆರುವು ಪ್ರದೇಶದ ಕಸ ಸಂಗ್ರಹ ಘಟಕದ ಆವರಣದಲ್ಲಿ ಏರ್ಪಡಿಸಿದ್ದ ವಾಹನಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದರು. ಮೇಯರ್ ಮುಲ್ಲಂಗಿ ನಂದೀಶ್, ಉಪ ಮೇಯರ್ ಡಿ.ಕುಸುಂ, ಮಾಜಿ ಮೇಯರ್ ಎಂ.ರಾಜೇಶ್ವರಿ, ಸದಸ್ಯರುಗಳಾದ ಪ್ರಭಂಜನಕುಮಾರ್, ಪಿ.ಗಾದೆಪ್ಪ, ಕುಬೇರಾ, ಮಿಂಚು ಸೀನಾ, ನೂರ್ ಮೊಹಮ್ಮದ್, ಪದ್ಮರೋಜ, ಟಿ.ನಾಜು, ಕಾಂಗ್ರೆಸ್ ಮುಖಂಡರಾದ ಅಯಾಜ್ ಅಹ್ಮದ್, ಸುಬ್ಬರಾಯುಡು, ಚಂಪಾ ಚವ್ಹಾಣ್ ಸೇರಿದಂತೆ ಹಲವರು ಹಾಜರಿದ್ದರು.

**ವಿವಿಧ ಕಾಮಗಾರಿಗಳಿಗೆ ಚಾಲನೆ:**

ಮಂಗಳವಾರ ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ವಾರ್ಡುಗಳಲ್ಲಿ ಏರ್ಪಡಿಸಿದ್ದ ಭೂಮಿ ಪೂಜೆ ಕಾರ್ಯಕ್ರಮಗಳಲ್ಲಿ ಶಾಸಕ ನಾರಾ ಭರತ್ ರೆಡ್ಡಿಯವರು ಭಾಗವಹಿಸಿದರು.

ವಾರ್ಡ್ ಸಂಖ್ಯೆ 3ರ ವ್ಯಾಪ್ತಿಯ ಬಂಡಿಮೋಟ್ ಮಸೀದಿ ಹಿಂಭಾಗ ಅಂದಾಜು ವೆಚ್ಚ 63 ಲಕ್ಷ 50 ಸಾವಿರ ರೂ.ಗಳ ವೆಚ್ಚದಲ್ಲಿ ಮಳೆ ನೀರು ಕಾಲುವೆಯ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ತದನಂತರ ವಾರ್ಡ್ ಸಂಖ್ಯೆ 13ರ ಮಿಲ್ಲರ್ ಪೇಟೆಯಲ್ಲಿ ಅಂದಾಜು ವೆಚ್ಚ 50 ಲಕ್ಷ ರೂ.ಗಳ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಲಾಯಿತು. ಅದೇ ರೀತಿ ವಾರ್ಡ್ ಸಂಖ್ಯೆ 17ರ ವಿಶಾಲ ನಗರ – ಹನುಮಾನ ನಗರದಲ್ಲಿ ಅಂದಾಜು ವೆಚ್ಚ 31 ಲಕ್ಷ 83 ಸಾವಿರ ರೂ.ಗಳ ವೆಚ್ಚದಲ್ಲಿ ಕಾಮಗಾರಿಗೆ, ಅಂಜಿನಪ್ಪ ನಗರ ಹಾಗೂ ಬಿ.ಗೋನಾಳ್ ಗ್ರಾಮದ ಅಂಗನವಾಡಿ ನಿರ್ಮಾಣ ಕಾಮಗಾರಿಗಳಿಗೆ (ಅನುಕ್ರಮವಾಗಿ ಅಂದಾಜು 40 ಲಕ್ಷ ರೂ.ಗಳು,
20 ಲಕ್ಷ ರೂ.ಗಳ ವೆಚ್ಚ) ಚಾಲನೆ ನೀಡಲಾಯಿತು.

ಈ ಸಂದರ್ಭ ಪಾಲಿಕೆಯ ಸದಸ್ಯರುಗಳಾದ ಎಂ.ಪ್ರಭಂಜನಕುಮಾರ್, ಕಾಂಗ್ರೆಸ್ ಮುಖಂಡರಾದ ಹೊನ್ನಪ್ಪ, ಹಗರಿ ಗೋವಿಂದ ಸೇರಿದಂತೆ ಹಲವರು ಹಾಜರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State